ವಿಜಯಪುರ | ಸಂಪುಟ 04 | ಸಂಚಿಕೆ 186 | ಪುಟ 04 | ₹ 3.00
https://udayarashminews.com
udayarashmi 90088 88340

# ಉದಯ ರಶ್ಮಿ

Udayarashmi Kannada Daily
ಜನಪರ-ಜೀವಪರ
ಕನ್ನಡ ದಿನಪತ್ರಿಕೆ
ಸಂಪಾದಕ : ಇಂದುಶೇಖರ ಮಣೂರ
Editor: Indushekhar Manur
editor.udayarashmi@gmail.com
RNI NO: KARKAN/2023/86203
ಬುಧವಾರ, ಸೆಪ್ಟೆಂಬರ್, 16, 2026

"ನಮ್ಮದು ಸರ್ವಜನಾಂಗದ ಶಾಂತಿಯ ತೋಟ. ಆದರೆ, ಬಿಜೆಪಿ ನಾಯಕರು ವಿನಾಕಾರಣ ಗೊಂದಲ ಸೃಷ್ಟಿಸಲು ಯತ್ನಿಸುತ್ತಿದ್ದಾರೆ. ಸಂಘರ್ಷ ಆಗಬಾರದು ಎಂಬುದು ಪೊಲೀಸ್ ಇಲಾಖೆ ಉದ್ದೇಶ. ಅನ್ಯ ಧರ್ಮೀಯರು ಆರ್. ಅಶೋಕ್ ಹಾಗೂ ಪ್ರತಾಪ್ ಸಿಂಹ ಮನೆ ಮುಂದೆ ಬಂದು ಪಟಾಕಿ ಹೊಡೆದರೆ, ಡಿಜೆ ಹಾಕಿದರೆ ನೀವು ಸುಮ್ಮನಿರುತ್ತೀರಾ?"



■ ಹೆಚ್.ಸಿ. ಬಾಲಕೃಷ್ಣ
ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು



## ತಾಳಿಕೋಟೆಯಲ್ಲಿ ಯತ್ನಾಳ ರೋಡ ಶೋದಲ್ಲಿ ಜೆಸಿಬಿಗಳ ಮೆರವಣಿಗೆ । ಬೈಕ್ ರ್‍ಯಾಲಿ ಮೂಲಕ ಅದ್ದೂರಿ ಸ್ವಾಗತ

# ಹಿಂದುತ್ವದ ನಾಯಕತ್ವ ಕರ್ನಾಟಕಕ್ಕೆ ಬೇಕಿದೆ :ಯತ್ನಾಳ

■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ಹಿಂದೂ ಸಮಾಜ ಒಗ್ಗಟ್ಟಾಗಿ ತನ್ನ ಶಕ್ತಿ ಪ್ರದರ್ಶಿಸುವ ಅಗತ್ಯವಿದೆ. ಸಮಾಜದಲ್ಲಿ ಜಾತಿ-ಜಾತಿಗಳಾಗಿ ವಿಭಜನೆಯಾದರೆ ದೇಶದ ಏಕತೆಗೆ ಧಕ್ಕೆಯಾಗುತ್ತದೆ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ(ಯತ್ನಾಳ) ಅವರು ಹೇಳಿದರು. ತಾಳಿಕೋಟೆಯಲ್ಲಿ ಭಗತ್ ಸಿಂಗ್ ಯುವಕ ಮಂಡಳಿಯ ಗಣೇಶೋತ್ಸವದ ದಶಮಾನೋತ್ಸವ ಅಂಗವಾಗಿ ಸೋಮವಾರರಂದು ಆಯೋಜಿಸಲಾದ ಹಿಂದೂ ಏಕತಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಧಾರ್ಮಿಕ ಕಾರ್ಯಕ್ರಮಗಳು ಸಮಾಜವನ್ನು ಜಾಗೃತಗೊಳಿಸುವ ಹಾಗೂ ಜನರನ್ನು ಒಗ್ಗೂಡಿಸುವ ವೇದಿಕೆಗಳಾಗಬೇಕು ಎಂದರು. ಕೆಲವು ಕಡೆ ಧಾರ್ಮಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ವಿಧಿಸಲಾಗುವ ನಿರ್ಬಂಧಗಳ ಕುರಿತು ಮಾತನಾಡಿದ ಅವರು, ಎಲ್ಲ ಸಮುದಾಯಗಳಿಗೂ ಸಮಾನ ಅವಕಾಶ ಮತ್ತು ಸಮಾನ ಕಾನೂನು ಅನ್ವಯವಾಗಬೇಕು. ಯಾವುದೇ ಸಮುದಾಯದ ಧಾರ್ಮಿಕ ಆಚರಣೆಗೆ ಅನಗತ್ಯ ನಿರ್ಬಂಧ ಇರಬಾರದು ಎಂದು ಹೇಳಿದರು.

ಭಗತ್ ಸಿಂಗ್ ಯುವಕ ಮಂಡಳಿ ಹತ್ತು ವರ್ಷಗಳ ನಂತರ ಹಿಂದೂ ಏಕತಾ ಸಮಾವೇಶದಂತಹ ದೊಡ್ಡ ಕಾರ್ಯಕ್ರಮದ ಮೂಲಕ ಯುವಕರನ್ನು ಒಗ್ಗೂಡಿಸುತ್ತಿರುವುದು ಸಮಾಜದಲ್ಲಿ ಜಾಗೃತಿ ಮೂಡಿಸುವ ಕೆಲಸವಾಗಿದೆ. ನಾವು ಒಗ್ಗಟ್ಟಾಗದೆ ಜಾತಿ-ಜಾತಿಗಳಾಗಿ ಒಡೆದುಹೋದರೆ ದೇಶದ ಏಕತೆ ದುರ್ಬಲವಾಗುತ್ತದೆ ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಸಾಮಾಜಿಕ ಹಾಗೂ ಧಾರ್ಮಿಕ ಬೆಳವಣಿಗೆಗಳ ಕುರಿತು ಮಾತನಾಡಿದ ಯತ್ನಾಳ್, ಹಿಂದೂ ಸಮಾಜವು ತನ್ನ ಸಂಸ್ಕೃತಿ, ಪರಂಪರೆ ಹಾಗೂ ಹಕ್ಕುಗಳ ಬಗ್ಗೆ ಜಾಗೃತವಾಗಿರಬೇಕು ಎಂದರು.

ಕಾರ್ಯಕ್ರಮದ ಸಾನಿಧ್ಯವನ್ನು ಶ್ರೀ ಖಾಸ್ಗತೇಶ್ವರ ಮಠದ ಬಾಲ ಶಿವಯೋಗಿ ಶ್ರೀ ಸಿದ್ದಲಿಂಗ ದೇವರು ವಹಿಸಿದ್ದರು. ವೇದಿಕೆಯ ಮೇಲೆ ಬಿಜೆಪಿ ಮಾಜಿ ಜಿಲ್ಲಾ ಅಧ್ಯಕ್ಷ ಆರ್.ಎಸ್.ಪಾಟೀಲ (ಕೂಚಬಾಳ), ಜಿಪಂ ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ, ಬಸನಗೌಡ ಯಡಿಯಾಪೂರ, ಮಲ್ಲಿಕಾರ್ಜುನ ಹಿಪ್ಪರಗಿ ಮೊದಲಾದವರು ಉಪಸ್ಥಿತರಿದ್ದರು.

### ಕ್ಷೇತ್ರದಲ್ಲಿ ಎರಡು ಹುಲಿಗಳನ್ನು ಬಿಟ್ಟಿದ್ದೇನೆ!

ಇತ್ತೀಚೆಗೆ ಮುದ್ದೇಬಿಹಾಳದಲ್ಲಿ ಸ್ವಯಂ ಘೋಷಿತ ರೈತ ನಾಯಕ ನಾನು ರೈತರಿಗಾಗಿ ಪ್ರಾಣವನ್ನೇ ಕೊಡುತ್ತೇನೆ, ರಕ್ತವನ್ನೇ ಕೊಡುತ್ತೇನೆಂದು ಹೇಳುತ್ತಿದ್ದಾನೆ. ಇವನೇನು ಹನುಮಂತನಾ? ಎದೆ ಬಗೆದು ತೋರಿಸಲಿಕ್ಕೆ, ಎಂದು ಹೆಸರು ಹೇಳದೆ ನಡಹಳ್ಳಿ ವಿರುದ್ಧ ವ್ಯಂಗ್ಯದೊಂದಿಗೆ ಪ್ರಶ್ನಿಸಿದ ಯತ್ನಾಳ, ಇಂತವರ ರಾಜಕೀಯ ಅಂತ್ಯ ಬಂದಿದ್ದಾಗಿದೆ. ಅದಕ್ಕಾಗಿ ಆರ್. ಎಸ್.ಪಾಟೀಲ(ಕೂಚಬಾಳ), ಪ್ರಭು ದೇಸಾಯಿ ಎರಡು ಹುಲಿಗಳನ್ನು ಕ್ಷೇತ್ರದಲ್ಲಿ ಬಿಟ್ಟಿದ್ದೇನೆ. ಇವರ ಜೊತೆ ಎಲ್ಲರೂ ನಿಲ್ಲಿ. ಜನರಿಗಾಗಿ ನಿಜವಾಗಿ ಕೆಲಸ ಮಾಡುವ ಮೂಲಕ ತಮ್ಮ ಬದ್ಧತೆಯನ್ನು ತೋರಿಸುವ ಕಾರ್ಯ ಮುಂದೆ ಆಗಲಿದೆ ಎಂದು ಬಸನಗೌಡ ಪಾಟೀಲ (ಯತ್ನಾಳ) ಗುಡುಗಿದರು.

# ಏಕರೂಪ ನಾಗರಿಕ ಸಂಹಿತೆ ಜಾರಿ ನಿರ್ಧಾರಕ್ಕೆ ಸ್ವಾಗತ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ದೇಶದ 21 ಎನ್‌ಡಿಎ ಆಡಳಿತದ ರಾಜ್ಯಗಳಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ ಮಾಡುವ ನಿರ್ಧಾರ ಪ್ರಕಟಿಸಿರುವ ಕೇಂದ್ರ ಗೃಹ ಸಚಿವ ಅಮೀತ್ ಷಹಾ ಅವರ ಹೇಳಿಕೆ ಸ್ವಾಗತಾರ್ಹ, ಈ ಏಕರೂಪ ನಾಗರಿಕ ಸಂಹಿತೆ ಏಕತೆಯನ್ನು ಬೆಸೆಯುತ್ತದೆ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, 2029ರೊಳಗೆ ದೇಶದ 21 ಎನ್‌ಡಿಎ ಆಡಳಿತದ ರಾಜ್ಯಗಳಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ ಮಾಡುವ ವಿಷಯವನ್ನು ಮಂಡಿಸಿರುವ ಕೇಂದ್ರ ಗೃಹ ಸಚಿವರ ಹೇಳಿಕೆ ಅತ್ಯಂತ ಸಂತೋಷ ತರಿಸಿದೆ, ದೇಶವನ್ನು ಏಕತೆಯ ಭಾವದೊಂದಿಗೆ ಬೆಸೆಯುವ ಈ ನೀತಿ ನಮ್ಮ ರಾಜ್ಯ ಸರ್ಕಾರ ಸಹ ಜಾರಿಗೊಳಿಸಬೇಕು, ಇಲ್ಲವಾದರೆ ಮುಂದೆ ರಾಜ್ಯದಲ್ಲಿ ನಮ್ಮ ಬಿಜೆಪಿ ಸರ್ಕಾರಕ್ಕೆ ಅಧಿಕಾರಕ್ಕೆ ಬರುವುದು ನಿಶ್ಚಿತ, ಆಗಂತೂ ಈ ಏಕರೂಪ ನಾಗರಿಕರ ಸಂಹಿತೆ ಜಾರಿಯಾಗುವುದು ನಿಶ್ಚಿತ ಎಂದು ಜಿಗಜಿಣಗಿ ಹೇಳಿದ್ದಾರೆ.

ದೇಶದ ಪ್ರತಿಯೊಬ್ಬ ನಾಗರಿಕನಿಗೂ ಒಂದೇ ರೀತಿಯ ಕಾನೂನು ಅನ್ವಯವಾಗಬೇಕು. ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬ ಸಂವಿಧಾನದ ಆಶಯವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಏಕರೂಪ ನಾಗರಿಕ ಸಂಹಿತೆ ಮಹತ್ವದ ಹೆಜ್ಜೆಯಾಗಲಿದೆ. ಮಹಿಳೆಯರ ಹಕ್ಕುಗಳು, ಸಮಾನತೆ ಹಾಗೂ ಸಾಮಾಜಿಕ ನ್ಯಾಯವನ್ನು ಬಲಪಡಿಸುವ ಜೊತೆಗೆ ದೇಶದಲ್ಲಿ ಏಕತೆ ಮತ್ತು ಸಮಾನತೆಯ ಮನೋಭಾವವನ್ನು ಮತ್ತಷ್ಟು ಗಟ್ಟಿಗೊಳಿಸಲು ಸಹಕಾರಿಯಾಗಲಿದೆ ಎಂದು ಜಿಗಜಿಣಗಿ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ದೇಶದ ಹಿತದೃಷ್ಟಿಯಿಂದ ಕೈಗೊಳ್ಳುತ್ತಿರುವ ಸ್ವಾಗತಾರ್ಹ, ಇದಕ್ಕೆ ಪ್ರತಿಯೊಬ್ಬ ಭಾರತೀಯರು ಹೆಮ್ಮೆಯಿಂದ ಬೆಂಬಲಿಸಬೇಕು, ಬಿಜೆಪಿ ಸರ್ಕಾರಕ್ಕೆ ಬಲ ನೀಡಬೇಕು ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದ್ದಾರೆ.

# ಸೆ.17ರಂದು ಹಿರಿಯ ನಾಗರಿಕರಿಗೆ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳ ಆಯೋಜನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಹಿನ್ನೆಲೆಯಲ್ಲಿ ಸೆ.17ರಂದು ಬೆಳಿಗ್ಗೆ 10 ಗಂಟೆಗೆ ನಗರದ ಕನಕದಾಸ ಬಡಾವಣೆಯ ಈಜುಕೊಳದ ಬಳಿಯ ಒಳಾಂಗಣ ಕ್ರೀಡಾಂಗಣದಲ್ಲಿ ಹಿರಿಯ ನಾಗರಿಕರಿಗಾಗಿ ವಿವಿಧ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಸ್ಪರ್ಧೆಗಳಲ್ಲಿ ಭಾಗವಹಿಸಲು ಆಸಕ್ತಿಯಿರುವ ಹಿರಿಯ ನಾಗರಿಕರು ನಿಗದಿತ ದಿನದಂದು ಆಧಾರ್ ಕಾರ್ಡ್,ಹಿರಿಯ ನಾಗರಿಕರ ಕಾರ್ಡ್ ಸೇರಿದಂತೆ ಅಗತ್ಯ ದಾಖಲೆಗಳೊಂದಿಗೆ ಹಾಜರಾಗಬಹುದು. ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

60 ರಿಂದ 70 ವರ್ಷದೊಳಗಿನವರಿಗೆ ಮ್ಯೂಸಿಕಲ್ ಚೇರ್, 60ರಿಂದ 69 ವರ್ಷದವರು ಹಾಗೂ 70 ವರ್ಷ ಮೇಲ್ಪಟ್ಟವರಿಗೆ ಬಿರುಸಿನ ನಡಿಗೆ ಮತ್ತು ಬಕೆಟ್‌ಗೆ ಬಾಲ್ ಎಸೆಯುವ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಸಾಂಸ್ಕೃತಿಕ ಸ್ಪರ್ಧೆಗಳ ಅಂಗವಾಗಿ 60ರಿಂದ 70 ವರ್ಷದವರು ಹಾಗೂ 70 ವರ್ಷ ಮೇಲ್ಪಟ್ಟವರಿಗೆ ಗಾಯನ ಸ್ಪರ್ಧೆ ಮತ್ತು ಇದೇ ವಯೋಮಾನದವರಿಗೆ ಏಕಪಾತ್ರಾಭಿನಯ ಸ್ಪರ್ಧೆ ನಡೆಯಲಿದೆ.ಹೆಚ್ಚಿನ ಮಾಹಿತಿಗಾಗಿ ವಿಜಯಪುರ ಜಿಲ್ಲಾ ಸಂಯೋಜಕಿ ಪ್ರತಿಭಾ (ಮೊ: 9606151149), ವಿಜಯಪುರ ತಾಲೂಕು ಪಂಚಾಯತಿಯ ರವಿ ರಾರೋಡ (ಮೊ: 9035553337), ಇಂಡಿ ತಾಲೂಕು ಪಂಚಾಯತಿಯ ಪರಶುರಾಮ ಭೋಸಲೆ (ಮೊ: 9972441464), ಸಿಂದಗಿ ತಾಲೂಕು ಪಂಚಾಯತಿಯ ಮುತ್ತುರಾಜ ಸಾತಿಹಾಳ (ಮೊ: 9980019635), ಮುದ್ದೇಬಿಹಾಳ ತಾಲೂಕು ಪಂಚಾಯತಿಯ ಎಸ್.ಕೆ. ಘಾಟಿ (ಮೊ: 9740682979) ಹಾಗೂ ಬಸವನ ಬಾಗೇವಾಡಿ ತಾಲೂಕು ಪಂಚಾಯತಿಯ ಶ್ರೀಲೀಲಾ ಬಿರಾದಾರ (ಮೊ: 8722135660) ಅವರನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಪ್ರಕಟಣೆ ತಿಳಿಸಿದೆ.

## ಮಾಧ್ಯಮದವರಿಗೆ ಒಳ್ಳೆಯ ಆಹಾರ ನೀಡುತ್ತೇನೆ । ಅಕ್ರಮಗಳನ್ನ ಜನರ ಮುಂದಿಡುವುದು ನನ್ನ ಜವಾಬ್ದಾರಿ । ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿಕೆ

# ಯುದ್ಧ ಆರಂಭಕ್ಕೆ ವಿಜಯದಶಮಿ ಪ್ರಶಸ್ತ ಕಾಲ :ಎಚ್ಡಿಕೆ



ಹಾಸನ: ಇಡೀ ದೇಶವೇ ಅಲ್ಲೋಲ ಕಲ್ಲೋಲ ಆಗುವ ಸುದ್ದಿ ಕೊಡುತ್ತೇನೆ ಎಂದು ಹೇಳಿ ಅಮೆರಿಕಕ್ಕೆ ಹೋಗಿದ್ದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ವಾಪಸ್ ಬಂದಿದ್ದು, ಹಾಸನಕ್ಕೆ ಆಗಮಿಸಿ ತಾಯಿ ಚೆನ್ನಮ್ಮ ಅವರ ಸಮಾಧಿಗೆ ಭೇಟಿ ಕೊಟ್ಟರು. ಅಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಕುಮಾರಸ್ವಾಮಿ, ತಾವು ಆಡಿರುವ ಮಾತಿಗೆ ಬದ್ಧವಾಗಿರುವುದಾಗಿ ಪುನರುಚ್ಚರಿಸಿದ್ದಾರೆ.

ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ, ಅವ್ಯವಹಾರದ ಬಗ್ಗೆ ಜನರ ಮುಂದೆ ಇಡುವುದರಲ್ಲಿ ಯಾವುದೇ ರಾಜಿಯಿಲ್ಲ. ರಾಜ್ಯದಲ್ಲಿನ ಘಟನೆ ಬಗ್ಗೆ ಬಾಯಿ ಮುಚ್ಚಿಕೊಂಡಿರಲು ಆಗಲ್ಲ. ಈಗಿರುವ ಸರ್ಕಾರದ ಮಂತ್ರಿಗಳ ಅಡಿಯೇ ಕೆಪಿಎಸ್‌ಸಿ, ಎಇಇ ಹಗರಣಗಳು ನಡೆದಿವೆ. ಲಕ್ಷಾಂತರ ಯುವಕರ ಭಾವನೆಗಳನ್ನು ಮಾರಾಟಕ್ಕಿಟ್ಟು ವಸೂಲಿ ಮಾಡಲಾಗಿದೆ. ಇದ್ಯಾವುದನ್ನೂ ನಾನು ಹೇಳುತ್ತಿಲ್ಲ. ದಾಖಲೆಗಳು ಹೇಳುತ್ತಿವೆ. ಅಕ್ರಮಗಳನ್ನ ಜನರ ಮುಂದಿಡುವುದು ನನ್ನ ಜವಾಬ್ದಾರಿ. ತೀರ್ಮಾನ ಜನರದ್ದು ಎಂದು ಹೇಳಿದ್ದಾರೆ.

ನಾನು ಯಾವುದೇ ದಾಖಲೆ ಇಲ್ಲದೇ ಯಾರ ಬಗ್ಗೆಯೂ ಮಾತನಾಡಲು ಹೋಗುವುದಿಲ್ಲ, ನನ್ನ ಹೇಳಿಕೆ ಬಗ್ಗೆ ಎಲ್ಲರೂ ತಲೆಕೆಡಿಸಿಕೊಂಡಿದ್ದಾರೆ, ನಾನು ಮಾಧ್ಯಮ ಸ್ನೇಹಿತರಿಗೆ ನಿರಾಸೆ ಮಾಡೋದಿಲ್ಲ. ನಿಮಗೆ ಒಳ್ಳೆಯ ರೀತಿ ಆಹಾರವನ್ನ ಕೊಡುತ್ತೇನೆ. ವಿಜಯದಶಮಿ, ಅದು ಯುದ್ಧಕ್ಕೆ ಒಳ್ಳೆ ಕಾಲ ಆದ್ದರಿಂದ ಪ್ರಾರಂಭ ಮಾಡುತ್ತೇನೆ ಎಂದಿದ್ದಾರೆ.

ಡಿ ಕೆ ಶಿವಕುಮಾರ್ ತೋರಿಸಿರುವ ಪೆನ್"ಡ್ರೈವ್ ಬೇರೆ, ನನ್ನ ಬಳಿ ಇರುವ ದಾಖಲೆ ಬೇರೆ. ನಾನು ಖಾಲಿ ಪೆನ್'ಡ್ರೈವ್ ತೋರಿಸಿಕೊಂಡು ಸುತ್ತಾಡುತ್ತಿಲ್ಲ. ಹಾಗೆಯೇ ಚುನಾವಣೆಯ ವೇಳೆ ಒಂದು ಲಕ್ಷ ಪೆನ್'ಡ್ರೈವ್ ಹಂಚಿದ್ದಾರಲ್ವಾ, ನಾನು ಆ ರೀತಿ ಮಾಡಲು ಹೋಗುವುದಿಲ್ಲ. ಸಮಯ ಸಂದರ್ಭ ನೋಡಿ, ಕಾಂಗ್ರೆಸ್ಸಿನ ಅಕ್ರಮ ಕೆಲಸವನ್ನು ಬಹಿರಂಗಪಡಿಸಿ ಎಂದು ನನ್ನ ಕೆಲವು ಸ್ನೇಹಿತರು ನನಗೆ ಕೊಟ್ಟಿರುತ್ತಾರೆ ಎಂದರು.

ಅಲ್ಲೋಕ ಕಲ್ಲೋಲ ಆಗುವ ವಿಷಯ ಸದ್ಯದಲ್ಲೇ ಬರಲಿದೆ, ಆ ಪೆನ್'ಡ್ರೈವ್ ನಲ್ಲಿ ಇರುವುದೇ ಡಿಕೆ ಶಿವಕುಮಾರ್ ಅವರ ಹೆಸರು. ದೇವೇಗೌಡರ ಕುಟುಂಬವನ್ನು ಮುಗಿಸುತ್ತೇನೆ ಎಂದು ಹೇಳಿಕೊಂಡು ಬರುತ್ತಿರುವವರು ಯಾರು? ಈಗಿನ ಮುಖ್ಯಮಂತ್ರಿ ತಾನೇ, ನಮ್ಮ ಕುಟುಂಬದ ಬಗ್ಗೆ ಮಾತನಾಡಿದ್ದು. ಬಿಡದಿ, ನೈಸ್, ಏಕಖಅ ವಿಚಾರದ ಬಗ್ಗೆ ಮಾತನಾಡಿದ ಕೂಡಲೇ, ಪರಪ್ಪನ ಅಗ್ರಹಾರ, ಪೆನ್'ಡ್ರೈವ್ ವಿಚಾರ ಮುನ್ನಲೆಗೆ ಬಂದಿದೆ. ಎರಡು ವರ್ಷದಿಂದ ಪ್ರಜ್ವಲ್ ರೇವಣ್ಣ ಜೈಲಿನಲ್ಲಿ ಇದ್ದಾನೆ, ಇಷ್ಟು ದಿನ ಇಲ್ಲದೇ ಇದ್ದದ್ದು ಈಗ ಯಾಕೆ ಮುನ್ನಲೆಗೆ ಬರುತ್ತಿದೆ ಪ್ರಜ್ವಲ್ ಕೈಯಲ್ಲಿ ಫೋನ್ ಇದೆ, ಅದರಲ್ಲಿ ಅಶ್ಲೀಲ ದೃಶ್ಯ ಇದೆ ಎನ್ನುವುದನ್ನು ತಿಳಿದುಕೊಳ್ಳಲು ಎರಡು ವರ್ಷ ಬೇಕಾಯಿತಾ, ಈ ಡ್ರಾಮಾ ನಡೆಸುತ್ತಿರುವವರು ಯಾರು ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

### ಸತೀಶ್ ಜಾರಕಿಹೊಳಿ ನನ್ನನ್ನ ಭೇಟಿ ಮಾಡಿಲ್ಲ



ಸಚಿವ ಸತೀಶ್ ಜಾರಕಿಹೊಳಿ ಭೇಟಿ ಬಗ್ಗೆ ಮಾತಾಡಿದ ಕುಮಾರಸ್ವಾಮಿ ಅವರು, ನನ್ನನ್ನು ಅವರು ಭೇಟಿ ಮಾಡಿಲ್ಲ. ಅವರ ಪಕ್ಷದೊಳಗೆ ಏನೇನು ನಡೆಯುತ್ತಿದೆ ಅಂತ ಅವರೇ ಹೇಳಿದ್ದು, ನನ್ನ ವಿರುದ್ಧ ಯಾರೋ ಕಂಪ್ಲೇಂಟ್ ಕೊಟ್ಟಿದ್ದಾರೆ ಎಂದಿದ್ದಾರೆ. ದೂರು ಕೊಟ್ಟವರ ಬಗ್ಗೆಯೂ ಮುಖ್ಯಮಂತ್ರಿಗೆ ತಿಳಿಸಿದ್ದಾಗಿ ಹೇಳಿದ್ದಾರೆ ಎಂದು ಎಚ್ಡಿಕೆ ನುಡಿದರು.

### ಸಿಎಂ ಅವರೇ ಯಾಕೆ ಇದನ್ನೆಲ್ಲಾ ಮಾಡಿಸಿರಬಾರದು?



ಮುಖ್ಯಮಂತ್ರಿಗಳೇ ಇನ್ನೂ ಮೂರು-ನಾಲ್ಕು ಐದು ಜನರ ಮನೆಗಳ ಮೇಲೇ ರೇಡ್ ಆಗುತ್ತೆ ಎಂದು ಹೇಳಿದ್ದಾರೆ. ಅಂದರೆ ಮುಖ್ಯಮಂತ್ರಿಗಳಿಗೆ ಈ ಮಾಹಿತಿಯನ್ನು ಕೊಟ್ಟವರು ಯಾರು ಅದನ್ನು ಕಾಂಗ್ರೆಸ್ ಅವರು ಕೊಟ್ಟರಾ? ಯಾರು ಕೊಟ್ರು ಎಂದು ಮುಖ್ಯಮಂತ್ರಿಗಳೇ ಹೇಳಬೇಕು. ಕಾಂಗ್ರೆಸ್‌ನವರೇ ದೂರು ಕೊಟ್ಟಿದ್ದಾರೆ ಎಂದ್ಮೇಲೆ ಅವರೇ ಹೇಳಬೇಕಲ್ವಾ? ಇದನ್ನೆಲ್ಲಾ ಇವರೇ ಯಾಕೆ ಇದನ್ನೆಲ್ಲಾ ಮಾಡಿಸಿರಬಾರದು ಎಂದು ಸಿಎಂ ವಿರುದ್ಧ ಪರೋಕ್ಷವಾಗಿ ಕುಮಾರಸ್ವಾಮಿ ಆರೋಪ ಮಾಡಿದ್ದಾರೆ.

## ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ, ಯುವ ಸಂಸತ್ತು ಸಭೆಗೆ ಚಾಲನೆ ನೀಡಿದ ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ ಅಭಿಮತ

# ಭ್ರಾತೃತ್ವ ಭಾವದಲ್ಲಿ ಪ್ರಜಾಪ್ರಭುತ್ವದ ಸೌಂದರ್ಯವಿದೆ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಪ್ರಜಾಪ್ರಭುತ್ವ ವ್ಯವಸ್ಥೆ ಪ್ರತಿ ಐದು ವರ್ಷಕ್ಕೊಮ್ಮೆ ಮತ ಚಲಾಯಿಸುವುದಲ್ಲ. ಪ್ರಜಾಪ್ರಭುತ್ವ ಎಂದರೆ ಅದೊಂದು ಜವಾಬ್ದಾರಿ. ಸಂವಿಧಾನದ ಆಶಯದಂತೆ ಪರಸ್ಪರ ಚರ್ಚೆ, ಸಮಾಲೋಚನೆ,ಸಹಕಾರ ಹಾಗೂ ಸಮಾನತೆಯಿಂದ ಎಲ್ಲರನ್ನೂ ಒಗ್ಗೂಡಿಸಿಕೊಂಡು, ಎಲ್ಲರನ್ನೂ ಭ್ರಾತೃತ್ವ ಭಾವದಿಂದ ಕೊಂಡೊಯ್ಯುವುದೇ ಪ್ರಜಾಪ್ರಭುತ್ವದ ಸೌಂದರ್ಯ ಅಡಗಿದೆ ಎಂದು ನಾಗಠಾಣ ಶಾಸಕರಾದ ವಿಠ್ಠಲ ಕಟಕದೊಂಡ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಗಳ ಸಹಯೋಗದಲ್ಲಿ ಮಂಗಳವಾರ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ, ಯುವ ಸಂಸತ್ತು ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಹಕ್ಕಿನ ಬಗ್ಗೆ ಮಾತನಾಡುತ್ತಾರೆ. ಹಕ್ಕುಗಳಿಗೆ ಹೋರಾಟ ಮಾಡುತ್ತಾರೆ. ಆದರೆ ಹಕ್ಕಿನ ಜೊತೆಗೆ ಕರ್ತವ್ಯಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಪ್ರಜೆಯೂ ಹಕ್ಕಿನ ಜೊತೆಗೆ ಜವಾಬ್ದಾರಿ ಬಗ್ಗೆ ತಿಳಿವಳಿಕೆ ಹೊಂದಿರಬೇಕು ಎಂದರು.

2007 ರಲ್ಲಿ ವಿಶ್ವಸಂಸ್ಥೆಯಲ್ಲಿ ಸೆ. 15 ರಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಚರಿಸಬೇಕು ಎಂದು ಠರಾವು ಪಾಸು ಮಾಡಿತು. 2008 ರಿಂದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಆಚರಿಸುತ್ತಿದ್ದೇವೆ ಎಂದರು.

ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಪ್ರಜಾಪ್ರಭುತ್ವ ವ್ಯವಸ್ಥೆ ಎಂಬುದು ಈ ದೇಶದಲ್ಲಿ ಸರ್ವಾಂತರ್ಯಾಮಿಯಾಗಿದೆ. ಅದು ಎಲ್ಲ ಕಡೆಯೂ ಇದೆ. ಆದರೆ ಕಾನೂನು ಉಲ್ಲಂಘನೆಯಾದಾಗ ಸಂವಿಧಾನದ ಮಹತ್ವ ಅರಿವಿಗೆ ಬರುತ್ತದೆ. ಹಾಗಾಗಿ ಈ ದೇಶದಲ್ಲಿ ಯಾವುದೂ ಸುಪ್ರಿಂ ಅಲ್ಲ. ಸಂವಿಧಾನ ಮಾತ್ರವೇ ಸುಪ್ರಿಂ ಆಗಿದೆ ಎಂದು ವ್ಯಾಖ್ಯಾನಿಸಿದರು.

ಬೇರೆ ಬೇರೆ ರಾಷ್ಟ್ರಗಳಿಗಿಂತ ನಮ್ಮ ಸಂವಿಧಾನ ವಿಭಿನ್ನವಾಗಿದೆ. ದೇಶದಲ್ಲಿ ಏನೇ ಚಟುವಟಿಕೆ ನಡೆದರೂ, ನಮಗರಿವಿಲ್ಲದಂತೆ ನಡೆಯುತ್ತಲೇ ಇರುತ್ತವೆ. ಆದರೆ ಸಂವಿಧಾನದ ಆಶಯಕ್ಕೆ ಧಕ್ಕೆಯಾದಾಗ ಸಂವಿಧಾನದ ಮಹತ್ವ ಪ್ರತಿಯೊಬ್ಬರ ಅರಿವಿಗೆ ಬರುತ್ತದೆ. ಹಾಗಾಗಿ ಸಂವಿಧಾನ ಎಲ್ಲೆಡೆಯೂ ಹಾಸುಹೊಕ್ಕಾಗಿದೆ. ಸಂವಿಧಾನ ಸರ್ವಂತಾರ್ಯಾಮಿಯಾಗಿದೆ ಎಂದು ಜಿಲ್ಲಾಧಿಕಾರಿಗಳು ವಿವರಿಸಿದರು.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಓಂಕಾರ ಕಾಕಡೆ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಬ್ಬ ಆಚರಿಸುತ್ತಿದ್ದೇವೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎಷ್ಟರ ಮಟ್ಟಿಗೆ ಅಳವಡಿಸಿಕೊಂಡಿದ್ದೇವೆ ಎನ್ನುವುದನ್ನು ಸಿಂಹಾವಲೋಕನ ಮಾಡಿಕೊಳ್ಳುವುದೇ ಈ ಆಚರಣೆಯ ಹಿಂದಿರುವ ಗುಟ್ಟು ಎಂದರು.

ವಿವಿಧತೆಯಲ್ಲಿ ಏಕತೆ ಹೊಂದಿರುವ ಕೋಟ್ಯಂತರ ಜನರನ್ನು ಒಂದೇ ಸೂರಿನಡಿ ಮುನ್ನಡೆಸುತ್ತಿರುವ ನಮ್ಮ ಸಂವಿಧಾನದ ಕರ್ತೃ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಈ ದಿನದಂದು ಸ್ಮರಿಸಬೇಕು. ಭಿನ್ನಾಭಿಪ್ರಾಯ ಸಹಿಸುವ, ಸಮಾಜದ ಅಹಿಷ್ಣುತೆಯನ್ನು ಹೇಳುವುದೇ ಸಂವಿಧಾನವಾಗಿದೆ ಎಂದರು.

ಭಾರತದ ಅಮೃತಮಹೋತ್ಸವ ಅಂಗವಾಗಿ ಹೊಸದಿಲ್ಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಕ್ಕಮಹಾದೇವಿ ವಿವಿಯನ್ನು ಪ್ರತಿನಿಧಿಸಿ ಪ್ರಧಾನಿ ಎದುರು ಭಾಷಣ ಮಾಡಿ ಮಹತ್ಸಾಧನೆ ಮಾಡಿದ ಚಡಚಣದ ಸುಪ್ರಿಯಾ ಬನಸೋಡೆ ಈ ಸಂದರ್ಭದಲ್ಲಿ ಮಾತನಾಡಿದರು.

ವೇದಿಕೆ ಮೇಲೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಗಂಗಾಧರ ಸಂಬಣ್ಣಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ವಸಂತ ಹೊನಮೊಡೆ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ಹಣಾಧಿಕಾರಿಗಳಾದ ರಿಷಿ ಆನಂದ, ವಿಜಯಪುರ ಉಪವಿಭಾಗಾಧಿಕಾರಿ ಜುಫಿಶಾನ್ ಹಕ್, ಮಹಾನಗರ ಪಾಲಿಕೆ ಆಯುಕ್ತರಾದ ವಿಜಯ ಮೆಕ್ಕಳಕಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಮಲ್ಲನಗೌಡ ಬಿರಾದಾರ, ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಡಿ.ಜೆ.ಬಿರಾದಾರ, ಡೈಟ್ ಪ್ರಾಚಾರ್ಯರಾದ ಎಸ್.ಎಸ್. ಮುಜಾವರ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಕೆ. ಎ. ಉಪ್ಪಾರ, ತಾಲೂಕ ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಗುರುಶಾಂತಪ್ಪ ಬೆಳ್ಳುಂಡಗಿ, ಬಿ.ಆರ್. ಬನಸೋಡೆ, ವಿದ್ಯಾವತಿ ಅಂಕಲಗಿ, ಅಡಿವೆಪ್ಪ ಸಾಲಗಲ್, ರಮೇಶ ಆಸಂಗಿ, ಅಶೋಕ ಚಲವಾದಿ, ಚನ್ನು ಕಟ್ಟಿಮನಿ, ಸಿದ್ದು ರಾಯಣ್ಣವರ, ವಿನಾಯಕ ಗುಣಸಾಗರ, ಮಲ್ಲು ಬಿದರಿ, ಭೀಮರಾಯ ಜಿಗಜಿಣಗಿ, ಅಭಿಷೇಕ ಚಕ್ರವರ್ತಿ, ಮಹಾಂತೇಶ ಸಾಸಬಾಳ, ಗಿರೀಶ ಕುಲಕರ್ಣಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.


ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಮಹೇಶ ಪೋತದಾರ ಸಂವಿಧಾನ ಪೀಠಿಕೆ ವಾಚಿಸಿ, ಸ್ವಾಗತಿಸಿದರು. ತಾಲೂಕು ಸಮಾಜ ಕಲ್ಯಾಣಧಿಕಾರಿಗಳಾದ ಎಂ.ಜೆ. ಇಂಡಿ ಅವರು ವಂದಿಸಿದರು.

"ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಅಭಿವೃದ್ಧಿ ಶೀಲ ರಾಷ್ಟ್ರವಾಗಿ ಮುಂದುವರಿದಿದೆ. ಹಾಗಾಗಿ ಸಾಕಷ್ಟು ಕೆಲಸ ಮಾಡಬೇಕಾಗಿದೆ. ಇಂತಹ ವ್ಯವಸ್ಥೆ ಹೊಂದಿರುವ ನಮ್ಮ ರಾಷ್ಟ್ರದ ವಿದ್ಯಾರ್ಥಿಗಳು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸಾಕಷ್ಟು ಅರ್ಥ ಮಾಡಿಕೊಳ್ಳಬೇಕಿದೆ."



■ ಲಕ್ಷ್ಮಣ ನಿಂಬರಗಿ
ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

# ಸೆ.17ರಂದು ಅದ್ದೂರಿ ವಿಶ್ವಕರ್ಮ ಜಯಂತ್ಯೋತ್ಸವ



ಯಾದಗಿರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ, ಶ್ರೀ ವಿಶ್ವಕರ್ಮ ಜಯಂತ್ಯೋತ್ಸವ ಸಮಿತಿ ಹಾಗೂ ವಿವಿಧ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಸೆ.17ರಂದು ಮಧ್ಯಾಹ್ನ 2 ಗಂಟೆಗೆ ನಗರದ ಸರ್ಕಾರಿ ಪದವಿ ಮಹಾವಿದ್ಯಾಲಯದದಲ್ಲಿ ಅದ್ದೂರಿ ವಿಶ್ವಕರ್ಮ ಜಯಂತ್ಯೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಆನೆಗುಂದಿ ಸಂಸ್ಥಾನ ಸರಸ್ವತಿ ಪೀಠಾಧೀಶ ಹಾಗೂ ಯಾದಗಿರಿಯ ವಿಶ್ವಕರ್ಮ ಏಕದಂಡಗಿ ಮಠದ ಶ್ರೀ ರವೀಂದ್ರ ಸ್ವಾಮೀಜಿ ಹೇಳಿದರು.

ಶನಿವಾರ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಯಂತ್ಯೋತ್ಸವಕ್ಕೂ ಮುನ್ನ ವಿಶ್ವಕರ್ಮ ಚೌಕ್‌ನಿಂದ ಸರ್ಕಾರಿ ಪದವಿ ಮಹಾವಿದ್ಯಾಲಯದವರೆಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಜಯಂತ್ಯೋತ್ಸವದಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಸುಮಾರು ಸಾವಿರಕ್ಕೂ ಅಧಿಕ ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರು ಅಧ್ಯಕ್ಷತೆ ವಹಿಸುವರು. ಆನೆಗುಂದಿ ಸಂಸ್ಥಾನ ಸರಸ್ವತಿ ಪೀಠಾಧೀಶ ಹಾಗೂ ಯಾದಗಿರಿಯ ವಿಶ್ವಕರ್ಮ ಏಕದಂಡಗಿ ಮಠದ ಪರಮಪೂಜ್ಯ ಶ್ರೀ ರವೀಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಹಲವಾರು ಜನಪ್ರತಿನಿಧಿಗಳು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಭಗವಂತನ ದೇವತೆಗಳಿಗೆ ಶಿಲ್ಪಕಲೆ ಸೇರಿದಂತೆ ವಿವಿಧ ಕಲಾಕೃತಿಗಳನ್ನು ನಿರ್ಮಿಸಿದ ವಿಶ್ವಕರ್ಮರ ಕೊಡುಗೆ ಅಪಾರವಾಗಿದೆ. ಪ್ರಕೃತಿಯಲ್ಲಿ ಅಡಗಿರುವ ಕಲೆಯನ್ನು ಶಿಲ್ಪಕಲೆಯ ಮೂಲಕ ಸುಂದರವಾಗಿ ರೂಪಿಸಿದ ವಿಶ್ವಕರ್ಮರ ಪರಂಪರೆ, ಕಲೆ ಹಾಗೂ ಸಾಧನೆಗಳನ್ನು ಸ್ಮರಿಸುವುದೇ ಜಯಂತ್ಯೋತ್ಸವದ ಪ್ರಮುಖ ಉದ್ದೇಶವಾಗಿದೆ ಎಂದು ಶ್ರೀ ರವೀಂದ್ರ ಸ್ವಾಮೀಜಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವಿಶ್ವಕರ್ಮ ಏಕದಂಡಗಿ ಮಠದ ಶ್ರೀ ವಿಶ್ವಾಮೂರ್ತಿ ಸ್ವಾಮೀಜಿ, ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಯಾದಗಿರಿ ಜಿಲ್ಲಾ ಅಧ್ಯಕ್ಷ ಮಹೇಶ್ ತಳಿಬಿಡಿ, ದೇವಿದ್ರಪ್ಪ ಎಲ್., ಶಿವಣ್ಣ ವಿಶ್ವಕರ್ಮ, ಹನುಮಂತರಾಯ, ಬನಪ್ಪ ಕಾಳೆಬೆಳ್ಳಗುಂದಿ ಹಾಗೂ ಬನಪ್ಪ ವಿಶ್ವಕರ್ಮ ಗೋಡಿಯಾಳ ಉಪಸ್ಥಿತರಿದ್ದರು.

# ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಉತ್ಸವವನ್ನು ಯಶಸ್ವಿಗೊಳಿಸಲು ಸಚಿವ ಪ್ರಿಯಾಂಕ್ ಖರ್ಗೆ ಕರೆ

ಕಲಬುರಗಿ: ಕಲ್ಯಾಣ ಕರ್ನಾಟಕ ಉತ್ಸವ–2026ರ ಅಂಗವಾಗಿ ಇದೇ ಸೆಪ್ಟೆಂಬರ್ 16 ಮತ್ತು 17 ರಂದು ಕಲಬುರಗಿ ನಗರದಲ್ಲಿ ಆಯೋಜಿಸಲಾಗಿರುವ ವೈವಿಧ್ಯಮಯ ಸಾಂಸ್ಕೃತಿಕ, ಸಂಗೀತ, ನೃತ್ಯ ಹಾಗೂ ಮನರಂಜನಾ ಕಾರ್ಯಕ್ರಮಗಳಲ್ಲಿ ಸಾರ್ವಜನಿಕರು, ಯುವಜನರು, ವಿದ್ಯಾರ್ಥಿಗಳು ಹಾಗೂ ಕುಟುಂಬ ಸಮೇತರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಉತ್ಸವವನ್ನು ಯಶಸ್ವಿಗೊಳಿಸಬೇಕೆಂದು

ರಾಜ್ಯದ ಗೃಹ, ಐ.ಟಿ–ಬಿ.ಟಿ, ಇ–ಆಡಳಿತ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಕರೆ ನೀಡಿದ್ದಾರೆ.

ಕಲ್ಯಾಣ ಕರ್ನಾಟಕದ ಇತಿಹಾಸ, ಕಲೆ, ಸಂಸ್ಕೃತಿ, ಪರಂಪರೆ ಹಾಗೂ ಸ್ಥಳೀಯ ಪ್ರತಿಭೆಗಳನ್ನು ಜನರೊಂದಿಗೆ ಸಂಭ್ರಮಿಸುವ ಉದ್ದೇಶದಿಂದ ಕಲಬುರಗಿ ನಗರದ ವಿವಿಧ ವೇದಿಕೆಗಳಲ್ಲಿ ಎರಡು ದಿನಗಳ ಕಾಲ ಹಲವು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

79ನೇ ಕಲ್ಯಾಣ ಕರ್ನಾಟಕ ಉತ್ಸವ ನಮ್ಮ ಭಾಗದ ಇತಿಹಾಸ, ಕಲೆ, ಸಂಸ್ಕೃತಿ, ಪರಂಪರೆ ಮತ್ತು ಪ್ರತಿಭೆಯನ್ನು ಒಟ್ಟಾಗಿ ಸಂಭ್ರಮಿಸುವ ಜನರ ಉತ್ಸವಾಗಿರಲಿದೆ. ಕಲಬುರಗಿ ನಗರದ ಹಾಗೂ ಜಿಲ್ಲೆಯ ಜನರು ತಮ್ಮ ಕುಟುಂಬ ಮತ್ತು ಸ್ನೇಹಿತರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಎರಡು ದಿನಗಳ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಉತ್ಸವವನ್ನು ಯಶಸ್ವಿಗೊಳಿಸಬೇಕು" ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಮನವಿ ಮಾಡಿದ್ದಾರೆ.

ವಿಶೇಷವಾಗಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ವಿವಿಧ ಕಾರ್ಯಕ್ರಮಗಳನ್ನು ವೀಕ್ಷಿಸಿ, ನಮ್ಮ ಕಲಾವಿದರು ಮತ್ತು ಪ್ರತಿಭೆಗಳನ್ನು ಪ್ರೋತ್ಸಾಹಿಸಬೇಕು. ಸೆಪ್ಟೆಂಬರ್ 16 ಮತ್ತು 17ರಂದು ಕಲಬುರಗಿ ನಗರವೇ ಉತ್ಸವದ ಸಂಭ್ರಮದಲ್ಲಿ ಕಂಗೊಳಿಸಲಿದ್ದು, ಸಾರ್ವಜನಿಕರ ಸಕ್ರಿಯ ಭಾಗವಹಿಸುವಿಕೆಯೇ ಈ ಉತ್ಸವದ ಯಶಸ್ಸು ಎಂದು ಸಚಿವರು ತಿಳಿಸಿದ್ದಾರೆ.

ಸೆಪ್ಟೆಂಬರ್ 16ರ ಕಾರ್ಯಕ್ರಮಗಳು:

ಕಲಬುರಗಿ ನಗರದ ಪಬ್ಲಿಕ್ ಗಾರ್ಡನ್‌ನಲ್ಲಿ ಸಂಜೆ 6.30ರಿಂದ ಸ್ಥಳೀಯ ಪ್ರತಿಭೆಗಳಿಂದ ಕಲಾ ಪ್ರದರ್ಶನ, ನಂತರ ಶಾಸ್ತ್ರೀಯ ನೃತ್ಯ ಹಾಗೂ ನೃತ್ಯ ಕಾರ್ಯಕ್ರಮಗಳು ನಡೆಯಲಿವೆ. ರಾತ್ರಿ 8 ಗಂಟೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಂದ 'ಸ್ಟ್ರೀಟ್ ಫೆಸ್ಟಿವಲ್' ಗೆ ಚಾಲನೆ ನೀಡಲಾಗುತ್ತದೆ. ರಾತ್ರಿ 8.30 ರಿಂದ 10 ಗಂಟೆ ವರೆಗೆ ಸವಾರಿ ಬ್ಯಾಂಡ್ ತಂಡ ಕಲಾ ರಸಿಕರಿಗೆ ಸಂಗೀತ ಉಣಬಡಿಸಲಿದೆ.

ಇನ್ನು ಅಪ್ಪನ ಕೆರೆಯಲ್ಲಿ ಸಂಜೆ 7 ರಿಂದ 8.30 ಗಂಟೆ ವರೆಗೆ ಭೈರವ್ ಮತ್ತು ತಂಡದಿಂದ ಇಂಡೋ–ಫ್ಯೂಷನ್ ವಾದ್ಯ ಪ್ರದರ್ಶನ ನಡೆಯಲಿದೆ. 8.30 ಗಂಟೆಗೆ ಮುಖ್ಯಮಂತ್ರಿಗಳಿಂದ ಕೆರೆ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ರಾತ್ರಿ 9 ರಿಂದ 9.30 ಗಂಡೆ ವರೆಗೆ 3ಡಿ ಲೈಟ್ ಶೋ ಮತ್ತು ಡ್ರೋನ್ ಶೋ ಸಹ ನಡೆಯಲಿದೆ.

ಸೆಪ್ಟೆಂಬರ್ 17ರ ಕಾರ್ಯಕ್ರಮಗಳು:

ಪೊಲೀಸ್ ಪರೇಡ್ ಮೈದಾನದಲ್ಲಿ ಬೆಳಿಗ್ಗೆ 9 ಗಂಟೆಗೆ ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ಅಂಗವಾಗಿ ಮುಖ್ಯಮಂತ್ರಿಗಳಿಂದ ರಾಷ್ಟ್ರಧ್ವಜಾರೋಹಣ ಕಾರ್ಯಕ್ರಮ ನಡೆಯಲಿದೆ. ಆದರೆ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ತಂಡದಿಂದ ಅಂದು ಪರೇಡ್ ಮೈದಾನದಲ್ಲಿ ಬೆಳಿಗ್ಗೆ 8 ರಿಂದ 11 ಗಂಟೆ ವರೆಗೆ ಸಮೂಹ ನೃತ್ಯ ಹಾಗೂ ಖ್ಯಾತ ಕಲಾವಿದ ವಿಲಾಸ್ ನಾಯಕ್ ಅವರಿಂದ ಲೈವ್ ಪೇಂಟಿಂಗ್ ಕಾರ್ಯಕ್ರಮ ನಡೆಯಲಿದೆ.

ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಸಂಜೆ 6.30 ರಿಂದ 8 ಗಂಟೆ ವರೆಗೆ ಗಣೇಶ ವಂದನೆ, ವಿವೇಕ ಮರಳಿಧರನ್ ಅವರಿಂದ ಸ್ಟ್ಯಾಂಡಪ್ ಕಾಮಿಡಿ, ಸ್ಟೆಪ್ ಎನ್ ಸ್ಟೈಲ್ ತಂಡದಿಂದ ಸಮಕಾಲಿನ ನೃತ್ಯ, ಎಸ್.ಸೋನುವೇಣು ಗೋಪಾಲ ಅವರಿಂದ ಸ್ಟ್ಯಾಂಡಪ್ ಕಾಮಿಡಿ ಹಾಗೂ ರಾತ್ರಿ 8 ರಿಂದ 10 ಗಂಟೆ ವರೆಗೆ ಬೆಂಗಳೂರು ಮೂಲದ ಅಕೌಸ್ಟಿಕ್ ಸಾಗಾ ತಂಡವು ಬಹುಭಾಷಾ ಬ್ಯಾಂಡ್ ಪ್ರಸ್ತುತಪಡಿಸಲಿದೆ.

ಪಬ್ಲಿಕ್ ಗಾರ್ಡನ್‌ನಲ್ಲಿ ಸಂಜೆ 6.30ರಿಂದ 8 ಗಂಟೆ ವರೆಗೆ ನೃತ್ಯ ಕಾರ್ಯಕ್ರಮ, ಸುಗಮ ಸಂಗೀತ, ನೃತ್ಯ ಕಾರ್ಯಕ್ರಮ, ಸೃಷ್ಟಿ ಅವರಿಂದ ಸ್ಟ್ಯಾಂಡಪ್ ಕಾಮಿಡಿ ನಡೆಯಲಿದೆ. ರಾತ್ರಿ 8 ರಿಂದ 10 ಗಂಟೆ ವರೆಗೆ ಝೀ ಕನ್ನಡ ಸರಿಗಮಪಾ ತಂಡದಿಂದ ಸಂಗೀತ ಪ್ರದರ್ಶನ ನಡೆಯಲಿದೆ.

# ವಿದ್ಯಾರ್ಥಿಗಳು ರಾಜಕೀಯ ಪ್ರಜ್ಞೆ ಮೂಡಿಸಿಕೊಳ್ಳಬೇಕು: ಡಾ. ಶರಣಪ್ರಕಾಶ ಪಾಟೀಲ



ಕಲಬುರಗಿ: ಇಂದಿನ ವಿದ್ಯಾರ್ಥಿ ಸಮುದಾಯ ತಾವಾಯಿತು, ತಮ್ಮ ಓದು, ಉದ್ಯೋಗಕ್ಕೆ ಸೀಮಿತವಾಗದೆ ದೇಶ ನಿರ್ಮಾಣ ಮಾಡುವಲ್ಲಿ ಮತ್ತು ಸಮ–ಸಮಾಜ ನಿರ್ಮಾಣ ಮಾಡುವಲ್ಲಿ ರಾಜ–ಕೀಯ ಪ್ರಜ್ಞೆ ಹೊಂದುವುದು ಅತೀ ಅವಶ್ಯಕವಾಗಿದೆ ಎಂದು ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶಿಲತೆ ಹಾಗೂ ಜೀವನೋಪಾಯ ಖಾತೆ ಸಚಿವ ಡಾ.ಶರಣಪ್ರಕಾಶ ಪಾಟೀಲ ಕರೆ ನೀಡಿದರು.

ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಶಾಲಾ ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಹಾಗೂ ಕಾನೂನು ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಕಲಬುರಗಿ ನಗರದ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಕಚೇ–ರಿಯಲ್ಲಿ ಆಯೋಜಿಸಿದ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮವನ್ನು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ರಾಜಕೀಯ ಅರಿವಿಲ್ಲದ ಹೋದಲ್ಲಿ ಕೆಲವು ಪಟ್ಟ ಬದ್ಧ ಹಿತಾಸಕ್ತಿಗಳು ನಿಮ್ಮನ್ನು ತಪ್ಪು ದಾರಿಗೆ ಎಳೆಯುವ ಸಾಧ್ಯತೆ ಇದೆ. ಇದ–ರಿಂದ ಯಾರು ನಿಮ್ಮ ಅಭಿವೃದ್ದಿಗೆ, ದೇಶದ ಒಳಿತಿಗೆ ಹಿತವರು ಎಂಬುದನ್ನು ಅರಿಯಲು ರಾಜಕೀಯ ಜ್ಞಾನ ಹೊಂದಬೇಕಾದ ಅವಶ್ಯಕತೆ ಇದೆ ಎಂದು ಒತ್ತಿ ಹೇಳಿದ ಅವರು, ಪ್ರಜಾಪ್ರಭುತ್ವದಲ್ಲಿ ತಿಲಿಸಿರುವ ಕರ್ತವ್ಯ ಮತ್ತು ಹಕ್ಕುಗಳ ಕುರಿತು ಅರಿತಲ್ಲಿ ಮಾತ್ರ ಉತ್ತಮ ಆಡಳಿತ ನೀಡಲು ಸಾಧ್ಯವಾಗಲಿದೆ ಎಂದರು.

ದೇಶದ ಪ್ರತಿಯೊಬ್ಬ ಪ್ರಜೆಯೂ ಸ್ವಾಭಿಮಾನದಿಂದ ಬಾಳಲು ಮತ್ತು ಸಮಾನತೆಯ ಹಕ್ಕುಗಳನ್ನು ಪಡೆಯಲು ಸಂವಿಧಾನವೇ ಆಧಾರವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾಯಿತ ಜನಪ್ರತಿನಿಧಿಗಳು ರಾಜರಲ್ಲ, ಜನರ ಸೇವಕರು, ಇದು ಪ್ರಜಾಪ್ರಭುತ್ವದ ವೈಶಿಷ್ಟ್ಯವಾಗಿದೆ ಎಂದರು.

ಪ್ರಜಾಪ್ರಭುತ್ವದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ನಡುವೆ ಅಧಿಕಾರ ಹಂಚಿಕೆಯಾಗಿದ್ದು, ಯಾವುದೇ ಒಬ್ಬ ವ್ಯಕ್ತಿಯಲ್ಲಿ ಅಧಿಕಾರ ಕೇಂದ್ರೀಕೃತವಾಗಬಾರದು ಹಾಗೂ ದೇಶದ ಕಡೆ ಸಾಲಿನ ಮನುಷ್ಯನಿಗೂ ಸ್ವಾಭಿಮಾನದ ಬದುಕು ಸಿಗುವಂತೆ ಹಾಗೂ ವಿಶೇಷವಾಗಿ ಮಹಿಳೆಯರಿಗೆ ಸಮಾನ ಹಕ್ಕು, ಮತದಾನದ ಹಕ್ಕನ್ನು ಒದಗಿಸಿಕೊಟ್ಟ ಕೀರ್ತಿ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

371(ಜೆ) ವಿಶೇಷ ಕಾಯ್ದೆಯು ಸಂವಿಧಾನದಡಿಯಲ್ಲಿ ಒದಗಿಸಿದ ಪರಿಣಾಮವಾಗಿ, ಕಲ್ಯಾಣ ಕರ್ನಾಟಕದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳು ಲಭ್ಯವಾಗುತ್ತಿವೆ. ಇಲ್ಲಿಯವರೆಗೆ 80 ಸಾವಿರ ಸರ್ಕಾರಿ ಉದ್ಯೋಗ ಸ್ಥಳೀಯರಿಗೆ ಲಭಿಸಿದೆ. ಪ್ರತಿ ವರ್ಷ ಸಾವಿರ ವೈದ್ಯಕೀಯ, ಎಳೆಂಟು ಸಾವಿರ ಇಂಜಿನೀಯರ್ ಸೀಟುಗಳು ನಮ್ಮ ಭಾಗದ ಯುವಕರಿಗೆ ಲಭ್ಯವಾಗಿವೆ ಎಂದರು.

ದೇಶದ ದಿಕ್ಕು ಬದಲಿಸಿದ ಸಂವಿಧಾನ:

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ಅನೇಕ ಸ್ವಾತಂತ್ರ್ಯ ಸೇನಾನಿ ಹೋರಾಟಗರ ಅಹಿಂಸಾತ್ಮಕ ಹೋರಾಟದಿಂದ ದೇಶ ಸ್ವಾತಂತ್ರ್ಯ ಪಡೆದಾಗ ನಮ್ಮಲ್ಲಿ ಸಂವಿಧಾನ ಇರಲಿಲ್ಲ. ಕಟ್ಟ ಕಡೆಯ ವ್ಯಕ್ತಿಯ ನೋವನ್ನು ಅರಿತು ಅಂಬೇಡ್ಕರ್ ಅವರಿಗೆ ಸಂವಿಧಾನ ರಚನೆಯ ಜವಾಬ್ದಾರಿ ನೀಡಿದರು. ವಿವಿಧ ದೇಶಗಳ ಅಧ್ಯಯನ ನಡೆಸಿ ವಿವಿಧ ಧರ್ಮ, ಜಾತಿ, ಮತ ಪಂಥವನ್ನು ಹೊಂದಿರುವ ಭಾರತಕ್ಕೆ ಅನ್ವಯವಾಗುವಂತೆ ವಿಶಾಲವಾದ ಪ್ರಜಾ ಸ್ನೇಹಿ ಸಂವಿಧಾನವನ್ನು ಅಂಬೇಡ್ಕರ್ ರಚಿಸಿದ್ದು, ಇದು ದೇಶದ ದಿಕ್ಕನೆ ಬದಲಿಸಿದೆ ಎಂದರು.

ಸಂವಿಧಾನದಲ್ಲಿನ ಪ್ರತಿ ಶಬ್ದ, ಅಧ್ಯಾಯವನ್ನು ಕರಡು ಸಮಿತಿ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಅನುಮೋದಿಸಿದ್ದು, ಇದು ಯಾವುದೇ ಕಾಲ್ಪನಿಕ ಸಂವಿಧಾನವಲ್ಲ ಎಂಬುದನ್ನು ಎಲ್ಲರು ಅರಿಯಬೇಕು. ಇಂತಹ ಪ್ರಜಾಪ್ರಭುತ್ವ ಮಹತ್ವ ಸಾರಲು ಕಳೆದ ಮೂರು ವರ್ಷದಿಂದ ನಮ್ಮ ಸರ್ಕಾರ ಪ್ರಜಾಪ್ರಭುತ್ವ ದಿನಾಚರಣೆ ಆಯೋಜಿಸಿ ವಿದ್ಯಾರ್ಥಿ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ ಎಂದರು.ನಾಯಕತ್ವ ಗುಣ ಬೆಳೆಸಲು ಕಾಲೇಜು ಚುನಾವಣೆ ಘೋಷಣೆ:

ವಿದ್ಯಾರ್ಥಿ ದೆಸೆಯಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕೆಂಬ ಉದ್ದೇಶದಿಂದ ಪಿ.ಯು.ಸಿ, ಪದವಿ ಕಾಲೇಜು ಮಟ್ಟದಲ್ಲಿ ವಿದ್ಯಾರ್ಥಿ ಚುನಾವಣೆ ನಡೆಸಲು ನಮ್ಮ ಸರ್ಕಾರ ನಿರ್ಧರಿಸಿ ಈಗಾಗಲೆ ಸರ್ಕಾರಿ ಆದೇಶ ಸಹ ಹೊರಡಿಸಿದೆ. ಇದಕ್ಕೆ ಹಲವರ ವಿರೋಧವಿತ್ತು. ಅದ್ಯಾವುದನ್ನು ಲೆಕ್ಕಿಸದೆ ರಾಜಕೀಯ ಹಿನ್ನೆಲೆ ಇದ್ದವರೆ ಎಂ.ಎಲ್.ಎ, ಮಂತ್ರಿ ಆಗಬೇಕು ಎನ್ನುವ ಅಪವಾದ ದೂರ ಮಾಡಲು ಸಾಮಾನ್ಯ ವ್ಯಕಿ ಸಹ ರಾಜಕೀಯಕ್ಕೆ ಬರಬೇಕು. ದೇಶ ಸೇವೆ ಮಾಡುವ ನಾಯಕನಾಗಿ ಹೊರಹೊಮ್ಮಬೇಕು ಎಂಬ ಸದುದ್ದೇಶದಿಂದ ಇದನ್ನು ಜಾ–ರಿಗೆ ತರಲಾಗಿದೆ ಎಂದು ಡಾ.ಶರಣಪ್ರಕಾಶ ಪಾಟೀಲ ತಿಳಿಸಿದರು. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಟಿ. ಎನ್.ಭಾಸ್ಕರ್ ಮಾತನಾಡಿ, ಸಂಘರ್ಷ ಮತ್ತು ಸಂಕೀರ್ಣ ಪರ್ವದಲ್ಲಿ ನಾವೆಲ್ಲ ಇದ್ದೇವೆ. ಭಾರತವು ಪ್ರಜಾಶಾಹಿದಿಂದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಂದರು ಇದೂವರೆಗೆ ದೇಶದಲ್ಲಿ ಸಂಪೂರ್ಣ ಸಮಾನತೆ ಸಾಧಿಸಲು ಸಾಧ್ಯವಾಗಿಲ್ಲ. ಜಾತಿ, ಮತ, ಧರ್ಮಗಳ ನಡುವೆ ಅಂತರ ಹೆಚ್ಚಿದೆ. ಕೆಲವರ ವಕ್ರದುಷ್ಠಿ, ಸ್ವಾರ್ಥ ಇದಕ್ಕೆ ಕಾರಣ ಎಂದು ಅವರು ಅಭಿಪ್ರಾಯಪಟ್ಟರು.

ಪ್ರತಿಯೊಬ್ಬರಿಗೂ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮಾನತೆ ದೊರೆಯಲು ಸಂವಿಧಾನವೇ ಮೂಲ ಬುನಾದಿಯಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಡ, ಹಿಂದುಳಿದವರನ್ನು ಮೇಲೆತ್ತುವ ಕೆಲಸವಾದಲ್ಲಿ ಮಾತ್ರ ಪ್ರಜಾಪ್ರಭುತ್ವ ದಿನಾಚರಣೆ ಸಾಫಲ್ಯವಾಗುತ್ತದೆ.

ಯುವಕರ ಸಬಲೀಕರಣ, ಕೌಶಲ್ಯಾಭಿವೃದ್ಧಿ, ಮಹಿಳಾ ಸಬಲೀಕರಣ ಮತ್ತು ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡುವುದರ ಜೊತೆಗೆ ಜೀತಮುಕ್ತ ಹಾಗೂ ಸಮಾನತೆಯ ಭಾರತ ನಿರ್ಮಾಣದವಾದಲ್ಲಿ ಮಾತ್ರ ಜಾಗತಿ–ಕವಾಗಿ ಪ್ರಜಾಪ್ರಭುತ್ವ ಶ್ರೇಯಾಂಕದಲ್ಲಿ 53ನೇ ಸ್ಥಾನದಲ್ಲಿರುವ ಭಾರತವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಲು ಸಾಧ್ಯವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಇದೇ ಸಮಾರಂಭದಲ್ಲಿ ಸಚಿವ ಡಾ.ಶರಣಪ್ರಕಾಶ ಪಾಟೀಪಲ ಅವರು ಯುವ ಸಂಸತ್ತಿಗೆ ಚಾಲನೆ ನೀಡಿದರು. ಕು. ಆರಾಧ್ಯ ಅವರು ಸಂವಿಧಾನ ಪೀಠಿಕೆಯನ್ನು ಸರ್ವ–ರಿಗೂ ಬೋಧಿಸಿದರು. ಕಾರ್ಯಕ್ರಮದಲ್ಲಿ ಕಲಬುರಗಿ ಗ್ರಾಮೀಣ ಶಾಸಕ ಬಸವರಾಜ ಮತ್ತಿಮೂಡ್, ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ, ಜಿಲ್ಲಾಧಿಕಾರಿ ಇಕ್ರಂ ಶರೀಫ್, ಜಿಲ್ಲಾ ಪಂಚಾಯತ್ ಸಿ.ಇ.ಓ ರಾಹುಲಸಂಕನೂರ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪ್ರೀತಿ ದೊಡ್ಡಮನಿ, ಕಲಬುರಗಿ ಉಪ ವಿಭಾಗದ ಸಹಾಯಕ ಆಯುಕ್ತೆ ರಿತಿಕಾ ವರ್ಮಾ, ನ್ಯಾಯಾವಾದಿಗಳ ಸಂಘದ ಅಧ್ಯಕ್ಷ ಎಸ್.ವಿ.ಪಸಾರ ಸೇರಿದಂತೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು, ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅಣವೀರ ಹರಸೂರ್ ಸ್ವಾಗತಿಸಿದರು. ಉಪನ್ಯಾಸಕ ಡಾ. ರಾಜಶೇಖರ್ ಮಾಂಗ್ ನಿರೂಪಿಸಿದರು. ಪ್ರಾಂಶುಪಾಲ ಶಿವರಾಂ ಚವ್ಹಾಣ ವಂದಿಸಿದರು.

# ಅರಣ್ಯದಲ್ಲಿ ಬೇಟೆ: ನಾಡಬಂದೂಕುಗಳ ಸಮೇತ 7 ಮಂದಿ ಸೆರೆ

ಯಾದಗಿರಿ: ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ವನ್ಯಜೀವಿಗಳನ್ನು ಬೇಟೆಯಾಡುತ್ತಿದ್ದ ಆರೋಪದ ಮೇಲೆ ಏಳು ಮಂದಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದು, ಆರೋಪಿಗಳಿಂದ ಆರು ನಾಡಬಂದೂಕುಗಳು, ನವಿಲಿನ ಮಾಂಸ, ಜೀವಂತ ಆಮೆಗಳು ಸೇರಿದಂತೆ ಹಲವು ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.



ಯಾದಗಿರಿ ಪ್ರಾದೇಶಿಕ ಅರಣ್ಯ ವಲಯದ ಅರಕೇರಾ (ಕೆ) ಶಾಖೆಯ ಮೋಟ್ನಳ್ಳಿ ಗಸ್ತಿನ ಬಗ್ಗಲುಮಡು ಸೆಕ್ಷನ್–4ರ ಸರ್ವೇ ನಂ. 20.300ರ ಅರಣ್ಯ ಪ್ರದೇಶದಲ್ಲಿ ಸೆ.11ರ ರಾತ್ರಿ ಈ ಕಾರ್ಯಾಚರಣೆ ನಡೆದಿದೆ.

ಅರಣ್ಯ ಇಲಾಖೆ ಕಚೇರಿಗೆ ಬಂದ ಖಚಿತ ಮಾಹಿತಿ ಆಧರಿಸಿ ಸಿಬ್ಬಂದಿ ಇಲಾಖೆಯ ವಾಹನದಲ್ಲಿ ರಾತ್ರಿ ಗಸ್ತು ನಡೆಸುತ್ತಿದ್ದರು. ಈ ವೇಳೆ ಅರಣ್ಯ ಪ್ರದೇಶದಲ್ಲಿ ಜನರ ಗುಂಪಿನ ಶಬ್ದ ಕೇಳಿಬಂದ ಹಿನ್ನೆಲೆಯಲ್ಲಿ ಅನುಮಾನಗೊಂಡ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಏಳು ಮಂದಿ ಕಂಡುಬಂದಿದ್ದಾರೆ.

ವಿಚಾರಣೆ ವೇಳೆ ಆರೋಪಿಗಳು ಅರಣ್ಯ ಪ್ರದೇಶದಲ್ಲಿ ವನ್ಯಜೀವಿಗಳನ್ನು ಬೇಟೆಯಾಡಿರುವುದಾಗಿ ತಿಳಿಸಿದ್ದಾರೆ ಎಂದು ಅರಣ್ಯ ಇಲಾಖೆ ದಾಖಲೆಯಲ್ಲಿ ತಿಳಿಸಲಾಗಿದೆ. ಸ್ಥಳದಲ್ಲಿ ಎರಡು ನವಿಲುಗಳನ್ನು ಬೇಟೆಯಾಡಿ ಸುಟ್ಟಿರುವುದು ಹಾಗೂ ಅವುಗಳ ಮಾಂಸ ಪತ್ತೆಯಾಗಿದ್ದು, ಎರಡು ಜೀವಂತ ಆಮೆಗಳು ಸೇರಿದಂತೆ ವನ್ಯಜೀವಿಗಳನ್ನು ಹಿಡಿದಿರುವುದು ಕಂಡುಬಂದಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಬಂಧಿತರನ್ನು ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಬೀಮನಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ನಿಂಗಪ್ಪ, ವಾಸುದೇವ, ಕರೇಪ್ಪ, ಕಾಂತಪ್ಪ, ಯಲ್ಲಾಲಿಂಗ, ಬಸವರಾಜ ಹಾಗೂ ಮಲ್ಲಪ್ಪ ಎಂದು ಗುರುತಿಸಲಾಗಿದೆ. ಬಂಧಿತರೆಲ್ಲರೂ ಕೂಲಿ ಕಾರ್ಮಿಕರು ಎಂದು ಅರಣ್ಯ ಇಲಾಖೆ ದಾಖಲೆಯಲ್ಲಿ ತಿಳಿಸಲಾಗಿದೆ.


ಕಾರ್ಯಾಚರಣೆಯಲ್ಲಿ ಎರಡು ನವಿಲುಗಳ ಮಾಂಸ, 12 ಜೀವಿಗಳು, ಎರಡು ಜೀವಂತ ಆಮೆಗಳು, ಎರಡು ಟಾಗಳು, ಒಂದು ಕೊಡಲಿ, ಆರು ನಾಡಬಂದೂಕುಗಳು, ಸಂಬಂಧಿಸಿದ ವಸ್ತುಗಳು, ಮಾಂಸ ಬೇಯಿಸಲು ಬಳಸಿದ ಮಣ್ಣಿನ ಮಡಿಕೆ, ಸ್ಟೀಲ್ ಪ್ಲೇಗಳು ಹಾಗೂ ಏಳು ಮೊಬೈಲ್ ಫೋನಗಳನ್ನು ಅರಣ್ಯ ಇಲಾಖೆ ವಶಕ್ಕೆ ಪಡೆದಿದೆ.

ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ–1972, ಕರ್ನಾಟಕ ಅರಣ್ಯ ಕಾಯ್ದೆ ಹಾಗೂ ಆಯುಧ ಕಾಯ್ದೆಯ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಿ ಮುಂದಿನ ತನಿಖೆ ಕೈಗೊಳ್ಳಲಾಗಿದೆ.

ವಲಯ ಅರಣ್ಯಾಧಿಕಾರಿ ಬುರಾನುದ್ದೀನ್ ಹಾಗೂ ಉಪ ವಲಯ ಅರಣ್ಯಾಧಿಕಾರಿ ಮಂಜುನಾಥ ಹಂದ್ರಾಳ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದ್ದು, ಅರಣ್ಯ ಇಲಾಖೆ ಸಿಬ್ಬಂದಿ ಭಾಗವಹಿಸಿದ್ದರು.

# ವಿದ್ಯಾರ್ಥಿಗಳು ರಾಜಕೀಯ ಪ್ರಜ್ಞೆ ಮೂಡಿಸಿಕೊಳ್ಳಬೇಕು: ಡಾ. ಶರಣಪ್ರಕಾಶ ಪಾಟೀಲ

## ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ । ಚುನಾಯಿತ ಜನಪ್ರತಿನಿಧಿಗಳು ಜನರ ಸೇವಕರು



ಕಲಬುರಗಿ: ಇಂದಿನ ವಿದ್ಯಾರ್ಥಿ ಸಮುದಾಯ ತಾವಾಯಿತು, ತಮ್ಮ ಓದು, ಉದ್ಯೋಗಕ್ಕೆ ಸೀಮಿತವಾಗದೆ ದೇಶ ನಿರ್ಮಾಣ ಮಾಡುವಲ್ಲಿ ಮತ್ತು ಸಮ–ಸಮಾಜ ನಿರ್ಮಾಣ ಮಾಡುವಲ್ಲಿ ರಾಜಕೀಯ ಪ್ರಜ್ಞೆ ಹೊಂದುವುದು ಅತೀ ಅವಶ್ಯಕವಾಗಿದೆ ಎಂದು ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶಿಲತೆ ಹಾಗೂ ಜೀವನೋಪಾಯ ಖಾತೆ ಸಚಿವ ಡಾ.ಶರಣಪ್ರಕಾಶ ಪಾಟೀಲ ಕರೆ ನೀಡಿದರು.

ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಶಾಲಾ ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಹಾಗೂ ಕಾನೂನು ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಕಲಬುರಗಿ ನಗರದ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಕಚೇರಿಯಲ್ಲಿ ಆಯೋಜಿಸಿದ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮವನ್ನು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ರಾಜಕೀಯ ಅರಿವಿಲ್ಲದ ಹೋದಲ್ಲಿ ಕೆಲವು ಪಟ್ಟ ಬದ್ಧ ಹಿತಾಸಕ್ತಿಗಳು ನಿಮ್ಮನ್ನು ತಪ್ಪು ದಾರಿಗೆ ಎಳೆಯುವ ಸಾಧ್ಯತೆ ಇದೆ. ಇದರಿಂದ ಯಾರು ನಿಮ್ಮ ಅಭಿವೃದ್ದಿಗೆ, ದೇಶದ ಒಳಿತಿಗೆ ಹಿತವರು ಎಂಬುದನ್ನು ಅರಿಯಲು ರಾಜಕೀಯ ಜ್ಞಾನ ಹೊಂದಬೇಕಾದ ಅವಶ್ಯಕತೆ ಇದೆ ಎಂದು ಒತ್ತಿ ಹೇಳಿದ ಅವರು, ಪ್ರಜಾಪ್ರಭುತ್ವದಲ್ಲಿ ತಿಲಿಸಿರುವ ಕರ್ತವ್ಯ ಮತ್ತು ಹಕ್ಕುಗಳ ಕುರಿತು ಅರಿತಲ್ಲಿ ಮಾತ್ರ ಉತ್ತಮ ಆಡಳಿತ ನೀಡಲು ಸಾಧ್ಯವಾಗಲಿದೆ ಎಂದರು.

ದೇಶದ ಪ್ರತಿಯೊಬ್ಬ ಪ್ರಜೆಯೂ ಸ್ವಾಭಿಮಾನದಿಂದ ಬಾಳಲು ಮತ್ತು ಸಮಾನತೆಯ ಹಕ್ಕುಗಳನ್ನು ಪಡೆಯಲು ಸಂವಿಧಾನವೇ ಆಧಾರವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾಯಿತ ಜನಪ್ರತಿನಿಧಿಗಳು ರಾಜರಲ್ಲ, ಜನರ ಸೇವಕರು, ಇದು ಪ್ರಜಾಪ್ರಭುತ್ವದ ವೈಶಿಷ್ಟ್ಯವಾಗಿದೆ ಎಂದರು.

ಪ್ರಜಾಪ್ರಭುತ್ವದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ನಡುವೆ ಅಧಿಕಾರ ಹಂಚಿಕೆಯಾಗಿದ್ದು, ಯಾವುದೇ ಒಬ್ಬ ವ್ಯಕ್ತಿಯಲ್ಲಿ ಅಧಿಕಾರ ಕೇಂದ್ರೀಕೃತವಾಗಬಾರದು ಹಾಗೂ ದೇಶದ ಕಡೆ ಸಾಲಿನ ಮನುಷ್ಯನಿಗೂ ಸ್ವಾಭಿಮಾನದ ಬದುಕು ಸಿಗುವಂತೆ ಹಾಗೂ ವಿಶೇಷವಾಗಿ ಮಹಿಳೆಯರಿಗೆ ಸಮಾನ ಹಕ್ಕು, ಮತದಾನದ ಹಕ್ಕನ್ನು ಒದಗಿಸಿಕೊಟ್ಟ ಕೀರ್ತಿ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

371(ಜೆ) ವಿಶೇಷ ಕಾಯ್ದೆಯು ಸಂವಿಧಾನದಡಿಯಲ್ಲಿ ಒದಗಿಸಿದ ಪರಿಣಾಮವಾಗಿ, ಕಲ್ಯಾಣ ಕರ್ನಾಟಕದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳು ಲಭ್ಯವಾಗುತ್ತಿವೆ. ಇಲ್ಲಿಯವರೆಗೆ 80 ಸಾವಿರ ಸರ್ಕಾರಿ ಉದ್ಯೋಗ ಸ್ಥಳೀಯರಿಗೆ ಲಭಿಸಿದೆ. ಪ್ರತಿ ವರ್ಷ ಸಾವಿರ ವೈದ್ಯಕೀಯ, ಎಳೆಂಟು ಸಾವಿರ ಇಂಜಿನೀಯರ್ ಸೀಟುಗಳು ನಮ್ಮ ಭಾಗದ ಯುವಕರಿಗೆ ಲಭ್ಯವಾಗಿವೆ ಎಂದರು.

ದೇಶದ ದಿಕ್ಕು ಬದಲಿಸಿದ ಸಂವಿಧಾನ:

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ಅನೇಕ ಸ್ವಾತಂತ್ರ್ಯ ಸೇನಾನಿ ಹೋರಾಟಗರ ಅಹಿಂಸಾತ್ಮಕ ಹೋರಾಟದಿಂದ ದೇಶ ಸ್ವಾತಂತ್ರ್ಯ ಪಡೆದಾಗ ನಮ್ಮಲ್ಲಿ ಸಂವಿಧಾನ ಇರಲಿಲ್ಲ. ಕಟ್ಟ ಕಡೆಯ ವ್ಯಕ್ತಿಯ ನೋವನ್ನು ಅರಿತು ಅಂಬೇಡ್ಕರ್ ಅವರಿಗೆ ಸಂವಿಧಾನ ರಚನೆಯ ಜವಾಬ್ದಾರಿ ನೀಡಿದರು. ವಿವಿಧ ದೇಶಗಳ ಅಧ್ಯಯನ ನಡೆಸಿ ವಿವಿಧ ಧರ್ಮ, ಜಾತಿ, ಮತ ಪಂಥವನ್ನು ಹೊಂದಿರುವ ಭಾರತಕ್ಕೆ ಅನ್ವಯವಾಗುವಂತೆ ವಿಶಾಲವಾದ ಪ್ರಜಾ ಸ್ನೇಹಿ ಸಂವಿಧಾನವನ್ನು ಅಂಬೇಡ್ಕರ್ ರಚಿಸಿದ್ದು, ಇದು ದೇಶದ ದಿಕ್ಕನೆ ಬದಲಿಸಿದೆ ಎಂದರು.

ಸಂವಿಧಾನದಲ್ಲಿನ ಪ್ರತಿ ಶಬ್ದ, ಅಧ್ಯಾಯವನ್ನು ಕರಡು ಸಮಿತಿ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಅನುಮೋದಿಸಿದ್ದು, ಇದು ಯಾವುದೇ ಕಾಲ್ಪನಿಕ ಸಂವಿಧಾನವಲ್ಲ ಎಂಬುದನ್ನು ಎಲ್ಲರು ಅರಿಯಬೇಕು. ಇಂತಹ ಪ್ರಜಾಪ್ರಭುತ್ವ ಮಹತ್ವ ಸಾರಲು ಕಳೆದ ಮೂರು ವರ್ಷದಿಂದ ನಮ್ಮ ಸರ್ಕಾರ ಪ್ರಜಾಪ್ರಭುತ್ವ ದಿನಾಚರಣೆ ಆಯೋಜಿಸಿ ವಿದ್ಯಾರ್ಥಿ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ ಎಂದರು.

ನಾಯಕತ್ವ ಗುಣ ಬೆಳೆಸಲು ಕಾಲೇಜು ಚುನಾವಣೆ ಘೋಷಣೆ:

ವಿದ್ಯಾರ್ಥಿ ದೆಸೆಯಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕೆಂಬ ಉದ್ದೇಶದಿಂದ ಪಿ.ಯು.ಸಿ, ಪದವಿ ಕಾಲೇಜು ಮಟ್ಟದಲ್ಲಿ ವಿದ್ಯಾರ್ಥಿ ಚುನಾವಣೆ ನಡೆಸಲು ನಮ್ಮ ಸರ್ಕಾರ ನಿರ್ಧರಿಸಿ ಈಗಾಗಲೆ ಸರ್ಕಾರಿ ಆದೇಶ ಸಹ ಹೊರಡಿಸಿದೆ. ಇದಕ್ಕೆ ಹಲವರ ವಿರೋಧವಿತ್ತು. ಅದ್ಯಾವುದನ್ನು ಲೆಕ್ಕಿಸದೆ ರಾಜಕೀಯ ಹಿನ್ನೆಲೆ ಇದ್ದವರೆ ಎಂ.ಎಲ್.ಎ, ಮಂತ್ರಿ ಆಗಬೇಕು ಎನ್ನುವ ಅಪವಾದ ದೂರ ಮಾಡಲು ಸಾಮಾನ್ಯ ವ್ಯಕಿ ಸಹ ರಾಜಕೀಯಕ್ಕೆ ಬರಬೇಕು. ದೇಶ ಸೇವೆ ಮಾಡುವ ನಾಯಕನಾಗಿ ಹೊರಹೊಮ್ಮಬೇಕು ಎಂಬ ಸದುದ್ದೇಶದಿಂದ ಇದನ್ನು ಜಾರಿಗೆ ತರಲಾಗಿದೆ ಎಂದು ಡಾ.ಶರಣಪ್ರಕಾಶ ಪಾಟೀಲ ತಿಳಿಸಿದರು.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಟಿ.ಎನ್.ಭಾಸ್ಕರ್ ಮಾತನಾಡಿ, ಸಂಘರ್ಷ ಮತ್ತು ಸಂಕೀರ್ಣ ಪರ್ವದಲ್ಲಿ ನಾವೆಲ್ಲ ಇದ್ದೇವೆ. ಭಾರತವು ಪ್ರಜಾಶಾಹಿದಿಂದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಂದರು ಇದೂವರೆಗೆ ದೇಶದಲ್ಲಿ ಸಂಪೂರ್ಣ ಸಮಾನತೆ ಸಾಧಿಸಲು ಸಾಧ್ಯವಾಗಿಲ್ಲ. ಜಾತಿ, ಮತ, ಧರ್ಮಗಳ ನಡುವೆ ಅಂತರ ಹೆಚ್ಚಿದೆ. ಕೆಲವರ ವಕ್ರದುಷ್ಠಿ, ಸ್ವಾರ್ಥ ಇದಕ್ಕೆ ಕಾರಣ ಎಂದು ಅವರು ಅಭಿಪ್ರಾಯಪಟ್ಟರು.ಪ್ರತಿಯೊಬ್ಬ–ರಿಗೂ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮಾನತೆ ದೊರೆಯಲು ಸಂವಿಧಾನವೇ ಮೂಲ ಬುನಾದಿಯಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಡ, ಹಿಂದುಳಿದವರನ್ನು ಮೇಲೆತ್ತುವ ಕೆಲಸವಾದಲ್ಲಿ ಮಾತ್ರ ಪ್ರಜಾಪ್ರಭುತ್ವ ದಿನಾಚರಣೆ ಸಾಫಲ್ಯವಾಗುತ್ತದೆ.

ಯುವಕರ ಸಬಲೀಕರಣ, ಕೌಶಲ್ಯಾಭಿವೃದ್ಧಿ, ಮಹಿಳಾ ಸಬಲೀಕರಣ ಮತ್ತು ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡುವುದರ ಜೊತೆಗೆ ಜೀತಮುಕ್ತ ಹಾಗೂ ಸಮಾನತೆಯ ಭಾರತ ನಿರ್ಮಾಣದವಾದಲ್ಲಿ ಮಾತ್ರ ಜಾಗತಿಕವಾಗಿ ಪ್ರಜಾಪ್ರಭುತ್ವ ಶ್ರೇಯಾಂಕದಲ್ಲಿ 53ನೇ ಸ್ಥಾನದಲ್ಲಿರುವ ಭಾರತವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಲು ಸಾಧ್ಯವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಇದೇ ಸಮಾರಂಭದಲ್ಲಿ ಸಚಿವ ಡಾ.ಶರಣಪ್ರಕಾಶ ಪಾಟೀಪಲ ಅವರು ಯುವ ಸಂಸತ್ತಿಗೆ ಚಾಲನೆ ನೀಡಿದರು. ಕು. ಆರಾಧ್ಯ ಅವರು ಸಂವಿಧಾನ ಪೀಠಿಕೆಯನ್ನು ಸರ್ವರಿಗೂ ಬೋಧಿಸಿದರು.


ಕಾರ್ಯಕ್ರಮದಲ್ಲಿ ಕಲಬುರಗಿ ಗ್ರಾಮೀಣ ಶಾಸಕ ಬಸವರಾಜ ಮತ್ತಿಮೂಡ್, ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ, ಜಿಲ್ಲಾಧಿಕಾರಿ ಇಕ್ರಂ ಶರೀಫ್, ಜಿಲ್ಲಾ ಪಂಚಾಯತ್ ಸಿ.ಇ.ಓ ರಾಹುಲ ಸಂಕನೂರ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪ್ರೀತಿ ದೊಡ್ಡಮನಿ, ಕಲಬುರಗಿ ಉಪ ವಿಭಾಗದ ಸಹಾಯಕ ಆಯುಕ್ತೆ ರಿತಿಕಾ ವರ್ಮಾ, ನ್ಯಾಯಾವಾದಿಗಳ ಸಂಘದ ಅಧ್ಯಕ್ಷ ಎಸ್.ವಿ.ಪಸಾರ ಸೇರಿದಂತೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು, ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅಣವೀರ ಹರಸೂರ್ ಸ್ವಾಗತಿಸಿದರು. ಉಪನ್ಯಾಸಕ ಡಾ. ರಾಜಶೇಖರ್ ಮಾಂಗ್ ನಿರೂಪಿಸಿದರು. ಪ್ರಾಂಶುಪಾಲ ಶಿವರಾಂ ಚವ್ಹಾಣ ವಂದಿಸಿದರು.

# ಬಸವಣ್ಣನವರು ಬದುಕಿದ್ದು ಮೂವತ್ತಾರು ವರ್ಷಗಳು

**ಉದಯರಶ್ಮಿ ದಿನಪತ್ರಿಕೆ**

**ಸಂಶೋಧನಾತ್ಮಕ ಲೇಖನ**






ಮಹಾತ್ಮಾ ಬುದ್ಧನ ನಂತರ ಸುಮಾರು 1700 ವರ್ಷದ ನಂತರ ಭಾರತ ನೆಲದಲ್ಲಿ ಮತ್ತೊಂದು ಕ್ರಾಂತಿಯ ಕಿಡಿ ಹತ್ತಿತು. ಅದುವೇ ಮುಂದೆ ಕಲ್ಯಾಣ ಸಮಗ್ರ ಕ್ರಾಂತಿಗೆ ಮುನ್ನುಡಿಯಾಯಿತು. ವರ್ಗ ವರ್ಣ ಆಶ್ರಮ ಲಿಂಗ ಭೇದಗಳನ್ನು ಕಿತ್ತೆಸೆದು ಸಾರ್ವಕಾಲಿಕ ಸಮಾನತೆಯ ಸುಂದರ ಮುಕ್ತ ಸಮಾಜವನ್ನು ಕಟ್ಟಿದನು ಬಸವಣ್ಣ. ಪುರಾಣ ಪುಣ್ಯ ಕಥೆಗಳು ಏನೆ ಹೇಳಲಿ ಭಾರತದಲ್ಲಿಯೇ ಬಸವಣ್ಣ ಮೊಟ್ಟ ಮೊದಲ ಸ್ವತಂತ್ರ ವಿಚಾರವಾದಿ ಎಂದು ಇಂಗ್ಲೆಂಡಿನ ಸರ್ ಆರ್ಥರ್ ಮೈಲ್ಸ್ 1933 ರಲ್ಲಿ ಖ್ಶಜ ಐಚಿಟಿಜ ಔಜ ಐಟಿಂಚಿಟ ಎಂಬ ಪುಸ್ತಕದಲ್ಲಿ ಹೇಳಿದ್ದಾರೆ.


ಬಸವಣ್ಣನವರ ಕಾಲ ಜೀವನ ಜನ್ಮ ಐಕ್ಯದ ಬಗ್ಗೆ ಹಲವು ಬಗೆಯ ಭಿನ್ನ ಭಿನ್ನ ವಿಚಾರಗಳು ಪ್ರಸ್ತುತಗೊಂಡಿವೆ. ಬಸವಣ್ಣನವರು ಬದುಕಿದ್ದು 63 ವರ್ಷವೆಂತಲೂ, 65 ವರ್ಷವೆಂತಲೂ, ಇನ್ನೂ ಅನೇಕರು ಬಸವಣ್ಣನವರು ಬದುಕಿದ್ದು ಕೇವಲ ಮೂವತ್ತಾರು ವರ್ಷವೆಂತಲೂ ಹೇಳುತ್ತಾರೆ. ಹಾಗಿದ್ದರೆ ಅವರ ಜನ್ಮ ಹುಟ್ಟು ಐಕ್ಯದ ಬಗ್ಗೆ

**ತಾರ್ಕಿಕವಾಗಿ ಚರ್ಚಿಸೋಣಾ.**

ಬಸವಣ್ಣನವರು ಹುಟ್ಟಿದ್ದು 1131. ಡಾ. ಆರ್ ಸಿ ಹಿರೇಮಠರು ಡಾ ಸಿದ್ದಯ್ಯ ಪುರಾಣಿಕರು ಮುಂತಾದ ಅನೇಕರು ಬಸವಣ್ಣನವರ ಜನ್ಮ ದಾಖಲೆಯನ್ನು ಸಂಶೋಧಿಸಿ ದಾಖಲಿಸಿದ್ದಾರೆ. ಕಲ್ಯಾಣ ರಕ್ತ ಸಿಕ್ತ ಹೋರಾಟವು ಕ್ರಾಂತಿಯು 1167 ರಲ್ಲಿ ನಡೆದಿದೆ. ಅದೇ ವರ್ಷ ಬಿಜ್ಜಳನ ಕೊಲೆಯಾಗಿದೆ ಮತ್ತು ಬಸವಣ್ಣನವರು ಅದೇ ವರ್ಷ ಐಕ್ಯವಾಗಿದ್ದಾರೆ. ಇದಕ್ಕೆ ಅನೇಕ ಐತಿಹಾಸಿಕ ಪುರಾವೆಗಳಿವೆ. ಕಲ್ಯಾಣ ಕಳಚೂರ್ಯರ ವಂಶಾಡಳಿತವು ಬಿಜ್ಜಳನ ಮೊಮ್ಮಕ್ಕಳಾದ ಸಿಂಘಣನ ಪಟ್ಟವು 1183 ಕ್ಕೆ ಕೊನೆಗೊಳ್ಳುತ್ತದೆ, ಅಂದ ಮೇಲೆ ಬಸವಣ್ಣನವರು 1183 ರ ನಂತರ ಬದುಕಿದ್ದು ಹೇಗೆ ಸಾಧ್ಯ?

ಬಸವಣ್ಣನವರು ಬದುಕಿದ್ದು ಕೇವಲ ಮೂವತ್ತಾರು ವರುಷಗಳು

1167 ರಲ್ಲಿ ಬಿಜ್ಜಳನ ಕೊಲೆಯ ಐತಿಹಾಸಿಕ ದಾಖಲೆಗಳು ಸಿಗುತ್ತವೆ. ಬಸವಣ್ಣನವರ ಸಮಕಾಲೀನ ಶರಣ ಅಗ್ಗವಣಿ ಹೊನ್ನಯ್ಯನ ಉಲ್ಲೇಖವು 1179 ರ ಕಲಿದೇವರಪುರ ಶಾಸನ ಮತ್ತು 1180 ರ ಮರಡಿಪುರ ಶಾಸನದಲ್ಲಿ ಕಾಣುತ್ತೇವೆ. ಅಂದರೆ ಬಸವಣ್ಣನವರು ಈ ಎರಡು ಶಾಸನಗಳ ಕಾಲದಲ್ಲಿ ಇರದಿರುವುದು ತೋರುತ್ತದೆ. ಇನ್ನು ಅರ್ಜುನವಾಡಿ ಶಾಸನದಲ್ಲಿ ಬಸವಣ್ಣನಿಗೆ ಒಬ್ಬ ಅಕ್ಕ ಮತ್ತು ಒಬ್ಬ ಅಣ್ಣನಿದ್ದ ಬಗ್ಗೆ ಪುರಾವೆ ಇದೆ. ಅಕ್ಕನಾಗಮ್ಮನಿಗೂ ಹಾಗು ಬಸವಣ್ಣನವರಿಗೂ ಕನಿಷ್ಠ ಹನ್ನೆರಡು ವರುಷಗಳ ಅಂತರವಿರಬಹುದು. ಅದೇ ಕಾರಣಕ್ಕೆ ಚೆನ್ನಬಸವಣ್ಣನವರ ಜನ್ಮ



ವರ್ಷವನ್ನು 1141 ಎಂದು ದಾಖಲಿಸುತ್ತಾರೆ. ಸಂಶೋಧನೆ ಎಂಬುದು ಅಲ್ಪ ವಿರಾಮ ಎಂದು ಡಾ. ಎಂ ಎಂ ಕಲಬುರ್ಗಿ ಅವರ ಮಾತನ್ನು

ಇಲ್ಲಿ ನೆನಪಿಸಿಕೊಂಡು ಬಸವಣ್ಣನವರ ಜೀವತ ಕಾಲವನ್ನು ನಿರ್ಧ–ರಿಸುವುದು ಅತ್ಯಗತ್ಯವಾಗಿದೆ.

**ಒಂದು ಕಾಲಜ್ಞಾನದ ವಚನದಲ್ಲಿ ಬಸವಣ್ಣನವರು**
**"ಭಕ್ತಿಗೆ ಬೀಡಾಗಿತ್ತು ಕಲ್ಯಾಣವು ಮೂವತ್ತಾರು ವರುಷ**
**ಶಿವ ಸದನಕ್ಕೆ ನಿಂತಿತ್ತು ಇಪ್ಪತ್ತೇಳು ವರುಷ**
**ಅನುಭವ ಮಂಟಪಕೆ ಹನ್ನೆರಡು ವರುಷ"**
**ಎಂಬ ಅಂಶಗಳನ್ನು ಕಾಣುತ್ತೇವೆ.**

ಇಲ್ಲಿ ಕಲ್ಯಾಣವೆಂದರೆ ಬಿಜ್ಜಳನ ರಾಜ್ಯಧಾನಿ ಎಂದು ಪರಿಗಣಿಸದೆ ಕಲ್ಯಾಣವೆಂಬುದು ಪ್ರಣತಿ, ಕಲ್ಯಾಣವು ಪೃಥ್ವಿ ಭೂಮಿ ಧರೆ ಮರ್ತ್ಯಲೋಕವೆಂದು ತಿಳಿಯಬೇಕು. ತಾನು ಕಲ್ಯಾಣದಲ್ಲಿ ಅನುಭವಮಂಟಪಕ್ಕೆ ನಿಂತಿದ್ದು ಹನ್ನೆರಡು ವರುಷ, ಅಂದಾಗ ಎಂಟು ವರುಷದ ಬಾಲಕ ಬಸವಣ್ಣ ಕೂಡಲಸಂಗಮದಲ್ಲಿ ಹನ್ನೆರಡು ವರುಷ ಅಧ್ಯಯನ ಮಾಡಿ ಮುಂದೆ ಸೋದರ ಮಾವ ಬಲದೇವನ ಸಹಾಯದೊಂದಿಗೆ ಬಿಜ್ಜಳನ ಆಸ್ಥಾನದಲ್ಲಿನ ಮಂಗಳವೇಡೆಗೆ ಕಾರಣಿಕ ಹುದ್ದೆಯನ್ನು ಪಡೆಯುತ್ತಾನೆ ಬಸವಣ್ಣ, ಮುಂದೆ ಎರಡು ವರುಷದೊಳಗೆ ಬಸವಣ್ಣನವರ ಅಗಾಧವಾದ ಜ್ಞಾನ ಚತುರತೆಯನ್ನು ಮನಗಂಡ ಬಿಜ್ಜಳನು ಬಸವಣ್ಣನವರಿಗೆ ಕಲ್ಯಾಣದಲ್ಲಿ ಅರ್ಥ ಸಚಿವನನ್ನಾಗಿ ಮಾಡುತ್ತಾರೆ. ಬಸವಣ್ಣನವರು ತಮ್ಮ ಇಪ್ಪತ್ತನಾಲ್ಕನೆಯ ವಯಸ್ಸಿನಲ್ಲಿ ಅನುಭವ ಮಂಟಪ ಸ್ಥಾಪಿಸಿದರು. ತಮ್ಮ ಮೂವತ್ತಾರು ವರ್ಷದ ವಯಸ್ಸಿನಲ್ಲಿ ಕಲ್ಯಾಣ ಕ್ರಾಂತಿಗೆ ಕಾರಣವಾಯಿತು.

ಬಸವಣ್ಣನವರು ಮೂವತ್ತಾರು ವರುಷ ಬದುಕಿದರು ಎನ್ನುವದಕ್ಕೆ ಹಲವು ತರ್ಕ ಸಂಭಾವ್ಯತೆಗಳನ್ನು ಚರ್ಚಿಸೋಣ.

**ಹಲವು ತರ್ಕ ಸಂಭಾವ್ಯತೆಗಳು**

ಸೋದರಮಾವ ಬಸವಣ್ಣನವರಿಗಿಂತ ಚೆನ್ನಬಸವಣ್ಣ ಹತ್ತ–ರಿಂದ ಹನ್ನೆರಡು ವರುಷ ಚಿಕ್ಕವರು. ಅಂದರೆ ಬಸವಣ್ಣ 1131 ರಲ್ಲಿ ಜನಿಸಿದರು, ಚೆನ್ನಬಸವಣ್ಣನವರು 1144 ರಲ್ಲಿ ಜನಿಸಿದ್ದಾರೆ, ಕಾರಣ ಕಲ್ಯಾಣದ ರಕ್ತಿಸಿಕ್ತ ಕ್ರಾಂತಿಯ ಸಮಯದಲ್ಲಿ ಚೆನ್ನಬಸವಣ್ಣನರು 23 ವರುಷದವರಾಗಿದ್ದರು ಎಂದು ತಿಳಿದು ಬರುತ್ತದೆ. ಬಸವಣ್ಣನವರ ಅಕ್ಕ ಬಸವಣ್ಣನವರಿಗಿಂತ ಹನ್ನೆರಡು ವರುಷ ದೊಡ್ಡವಳಾಗಿದ್ದಳು. ಒಂದು ವೇಳೆ ಬಸವಣ್ಣನವರು ಕಲ್ಯಾಣ ಕ್ರಾಂತಿಯ ಸಮಯದಲ್ಲಿ ಮತ್ತು ಐಕ್ಯವಾಗುವ ಸಮಯದಲ್ಲಿ 63 ವರುಷದವರಾಗಿದ್ದರೆ ಅವರಕ್ಕ ನಾಗಮ್ಮ 75 ವರುಷದವರಾಗಿರುತ್ತಿದ್ದರು. ತಮ್ಮ ಇಳಿಯ ವಯಸ್ಸಿನಲ್ಲಿ ಅಕ್ಕ ನಾಗಮ್ಮ ಸೋವಿದೇವನ ಸೈನಿಕರೊಂದಿಗೆ ಕಾದಾಡಿ ವಚನಗಳ ರಕ್ಷಣೆಗೆ ಸುಮಾರು ಸಾವಿರು ಮೈಲಿ ನಡೆಯಲು ಹೇಗೆ ಸಾಧ್ಯ? ತಮ್ಮ ಐವತ್ತೆರಡನೇಯ ವಯಸ್ಸಿನಲ್ಲಿ ಚೆನ್ನ ಬಸವಣ್ಣನವರಿಗೆ ಜನ್ಮ ನೀಡಲು ಹೇಗೆ ಸಾಧ್ಯ? ಹಾಗು ಚೆನ್ನ ಬಸವಣ್ಣ ಮತ್ತು ಬಸವಣ್ಣವರ ವಯಸ್ಸಿನ ಅಂತರ ನಲವತ್ತಾಗುತ್ತದೆ. ಇದು ಖಂಡಿತ ಒಪ್ಪದ ಮಾತು. ಹೀಗೆ ಬಸವಣ್ಣನವರ ಆಯುಷ್ಯದ ಬಗ್ಗೆ ಇನ್ನು ನಿಷ್ಕರ್ಷವಾಗದೆ ಪ್ರತಿಯೊಬ್ಬ ಲೇಖಕ ಸಂಶೋಧಕರು ತಮಗೆ ತಿಳಿದಂತೆ ದಾಖಲಿಸುವುದು ಹಲವು ಗೊಂದಲಕ್ಕೆ ಕಾರಣವಾಗುತ್ತದೆ.

**ಹಿರಿಯ ಸಂಶೋಧಕರ ಕಾರ್ಯಾಗಾರವಾಗಲಿ**

ಈ ದಿಶೆಯಲ್ಲಿ ಒಂದು ಕಾರ್ಯಾಗಾರವನ್ನಿಟ್ಟು ನಾಡಿನ ಹಿರಿಯ ಸಂಶೋಧಕರನ್ನು ಕರೆದು ಶರಣರ ಕಾಲದ ಬಗ್ಗೆ ಸರ್ವ ಸಾಮಾನ್ಯ ಅಭಿಮತಕ್ಕೆ ಬರುವ ಹಾಗೆ ಚರ್ಚಿಸಿ, ಶರಣರ ಕಾಲ ಚರಿತ್ರೆಯ ಬಗೆಗಿನ ಹಲವು ಗೊಂದಲಕ್ಕೆ ಕೊನೆ ಹೇಳಬೇಕು. ಅಕ್ಕ ನಾಗಮ್ಮ ಬಸವಣ್ಣನವ–ರಿಗಿಂತ ದೊಡ್ಡವಳು ಎನ್ನುವುದಕ್ಕೆ ಹಲವು ಆಧಾರಗಳಿವೆ.

ಅಕ್ಕ ನಾಗಮ್ಮ ಬಸವಣ್ಣನವರ ಹಿರಿಯಕ್ಕ ತಂಗಿಯಲ್ಲ

ಬಸವಣ್ಣನವರ ಉಪನಯನ ಬಾಲ್ಯ ಮತ್ತೆ ಕೂಡಲ ಸಂಗಮಕ್ಕೆ ಹೋಗುವ ಸಂದರ್ಭದಲ್ಲಿ ತನಗಿಂತ ಹಿರಿಯ ಅಕ್ಕ ನಾಗಮ್ಮನಿಗೆ

ಉಪನಯನ ಮಾಡಲು ಬಸವಣ್ಣನವರು ಹಠ ತೊಟ್ಟರು. ಅದಕ್ಕೆ ವೈದಿಕ ವ್ಯವಸ್ಥೆ ಅವಕಾಶ ನೀಡುವುದಿಲ್ಲ, ಇದೆ ಕಾರಣಕ್ಕಾಗಿ ಬಸವಣ್ಣ ಬಾಗೇವಾಡಿಯನ್ನು ಬಿಟ್ಟನು. ಬಸವಣ್ಣನವರ ನೆರಳಾಗಿ ಅಕ್ಕ ನಾಗಮ್ಮ ಮತ್ತು ಮಾವನವರಾದ ಶಿವಸ್ವಾಮಿ ( ಶಿವದೇವ ) ಬಸವಣ್ಣನವರ ಆಶ್ರಯದ ಜೊತೆಗೆ ಮುಂದಿನ ಭವಿಷ್ಯ ರೂಪಿಸುವಲ್ಲಿ ಸಹಾಯಕರಾಗುತ್ತಾರೆ.

ಆದರೆ ಇಂದು ವಚನ ಸಾಹಿತ್ಯದಲ್ಲಿ ಹಿರಿಯ ಸಂಶೋಧಕ ಎಂ ಚಿದಾನಂದ ಮೂರ್ತಿ, ಡಾ ಎಂ ಎಂ ಕಲಬುರ್ಗಿ, ಡಾ ವೀರಣ್ಣ ರಾಜೂರ ಮುಂತಾದ ಸಂಶೋಧಕರು ಅಕ್ಕ ನಾಗಮ್ಮ ಬಸವಣ್ಣನವರ ತಂಗಿ ಎಂದು ದಾಖಲಿಸಿದ್ದಾರೆ.

ಬಸವಣ್ಣನವರಿಗೆ ಒಬ್ಬ ಅಕ್ಕ ಅಕ್ಕ ನಾಗಮ್ಮ ಮತ್ತು ಒಬ್ಬ ಅಣ್ಣ ದೇವರಾಜ ಇದ್ದನು ಎಂದು ಹಲವು ಜಾನಪದ ನುಡಿಗಳು ಮತ್ತು ಶಾಸನದಿಂದ ತಿಳಿದುಬರುತ್ತದೆ.

ಇದಕ್ಕೆಲ್ಲಾ ಮೂಲ ಕಾರಣ ಹರಿಹರನು ಅಕ್ಕ ನಾಗಮ್ಮ ಬಸವಣ್ಣನವರ ತಂಗಿ ಅನುಜೆ ಎಂದು ಹೇಳಿದ್ದಾನೆ. ಬಸವಣ್ಣನವರ ನಂತರದ ನೂರು ವರುಷದ ಆಸುಪಾಸು ಹರಿಹರ ಹುಟ್ಟಿದ್ದಾನೆ. ಹೀಗಾಗಿ ಡಾ.ಎಂ ಚಿದಾನಂದ ಮೂರ್ತಿ, ಡಾ ಎಂ ಎಂ ಕಲಬುರ್ಗಿ, ಡಾ ವೀರಣ್ಣ ರಾಜೂರ ಮುಂತಾದ ಸಂಶೋಧಕರು ಅಕ್ಕ ನಾಗಮ್ಮ ಬಸವಣ್ಣನವರ ತಂಗಿ ಎಂದು ಕರೆಯುತ್ತಾರೆ.

ಇಂತಹ ಅಭಿಪ್ರಾಯಗಳಿಂದ ಒಬ್ಬ ವಚನ ಸಾಹಿತ್ಯ ಓದುಗನಿಗೆ ಸಂಶೋಧಕರ ಅಭಿಮತಗಳಿಂದ ಗೊಂದಲ ಉಂಟಾಗುತ್ತದೆ.

ನಾನು ಅಕ್ಕ ನಾಗಮ್ಮ ಬಸವಣ್ಣನವರ ಹಿರಿಯಕ್ಕ, ತಂಗಿಯಲ್ಲ ಎಂದು ಹೇಳುತ್ತಾ ಜನಪದಿಗರ ಮೌಖಿಕ ಪದ್ಯಗಳನ್ನು ಹೇಳಿಕೆಗಳನ್ನು ಭಜನೆ ಪದ ಮುಂತಾದ ಆಕರಗಳಿಂದ ಮತ್ತು ಶತಮಾನಗಳಿಂದ ಇಂತಹ ಪುರಾಣ ಕಥೆಗಳಿಂದ ಅಕ್ಕ ನಾಗಮ್ಮ ಬಸವಣ್ಣನವರ ಹಿರಿಯಕ್ಕ ಎಂದು ಸಿದ್ದವಾದರೂ ಸಹಿತ ಇವತ್ತಿನ 5 ನೆಯ ವಚನ ಸಂಪುಟದ ಬಸವಣ್ಣನವರ ವಚನಗಳು ಆವೃತ್ತಿಯಲ್ಲೂ ಕೂಡ ಅಕ್ಕ ನಾಗಮ್ಮ ಬಸವಣ್ಣನವರ ತಂಗಿ ಎಂದು ದಾಖಲಿಸಿದ್ದಾರೆ.


**ಜನಪದಿಗರ ದೃಷ್ಟಿಯಲ್ಲಿ ಅಕ್ಕ ನಾಗಮ್ಮ**

ವೇದ ಸುಳ್ಳಾಗಬಹುದು ಜಾನಪದ ಗಾದೆ ಸುಳ್ಳಾಗಲು ಸಾಧ್ಯವಿಲ್ಲ ಎನ್ನುವಂತೆ, ಜನಪದಿಗರು ಶರಣರ ಜೀವನ ಚರಿತ್ರೆಯನ್ನು ತಮ್ಮ ತ್ರಿಪದಿಗಳಲ್ಲಿ ದಾಖಲಿಸಿದ್ದಾರೆ.

**"ಹಡೆದವ್ವ ಮಾದವ್ವ ಮಾದರಸು**
**ಪಡೆದವ್ವ ಅಕ್ಕ ನಾಗಾಯಿ / ಬಸವನಿಗೆ**
**ಬಿಡದೆ ಸಲುಹಿದನು ವರಸಂಗ"**

**ಇಲ್ಲಿ ಜಾನಪದ ಕವಿಯು ಬಸವಣ್ಣನ ಅಪ್ಪ ಅವ್ವ ಮತ್ತು ಹಡೆದವ್ವನಂತೆ ಕಾಳಜಿ ಪ್ರೀತಿ ವಾತ್ಸಲ್ಯವನ್ನು ತೋರುವ ಅಕ್ಕ ನಾಗಾಯಿ ಎಂಬ ಅಕ್ಕನಿದ್ದಳು ಎನ್ನುತ್ತಾರೆ.**

**"ಬಸವ ನಿನಗೊಬ್ಬಣ್ಣ ಬಸವಗೊಬ್ಬಳೇ ಅಕ್ಕ**



**ಬಸವ ನಿನ್ನೆಸರು ಅಮರಾತು/ ಜಗಕೆಲ್ಲ**
**ಬಸವ ಕಲ್ಯಾಣ ಹೆಸರಾತು"**

**ಇಲ್ಲಿಯೂ ಕೂಡ ಬಸವಣ್ಣನಿಗೆ ಒಬ್ಬ ಅಣ್ಣ ಮತ್ತು ಅಕ್ಕ ನಾಗಮ್ಮಳಿದ್ದಳು ಎನ್ನುವುದು ಸ್ಪಷ್ಟವಾಗುತ್ತದೆ.**
**ಅಕ್ಕ ನಾಗಮ್ಮ ಬಸವಣ್ಣನವರ ಹಿರಿಯಕ್ಕ ತಂಗಿಯಲ್ಲ ಎನ್ನುವುದಕ್ಕೆ ಅಕ್ಕ ನಾಗಮ್ಮನವರ ಒಂದು ವಚನವೇ ಸಾಕ್ಷಿಯಿದೆ.**

**"ಬಸವನೆ ಮಖಸೆಜ್ಜೆ, ಬಸವನೆ ಅಮಳೋಕ್ಯ.**

**ಬಸವನ ನಾನೆತ್ತಿ ಮುದ್ದಾಡಿಸುವೆನು.**
**ಬಸವಾ, ಸಂಗನಬಸವಿದೇವಾ ಜಯತು.**
**ಬಸವಾ, ಸಂಗನಬಸವಲಿಂಗಾ ಜಯತು.**
**ಬಸವಗೂ ಎನಗೂ ಭಾವಭೇದವಿಲ್ಲದ**
**ಬಸವಗೂ ಎನಗೂ ರಾಸಿಕೂಟವುಂಟು.**
**ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ**
**ಬಸವನ ಬೆಸರಾದ ಬಾಣತಿ ನಾನಯ್ಯಾ**
**ಬಸವಾ,ಬಸವಾ,ಬಸವಾ"**

ಬಸವಣ್ಣನವರ ಬಗ್ಗೆ ಬರೆಯುತ್ತಾ ಅಕ್ಕ ನಾಗಮ್ಮ ತನ್ನ ತಾಯಿ ಮಾದಲಾಂಬಿಕೆ ಗರ್ಭಿಣಿಯಾದಾಗ ಮತ್ತು ಬಸವಣ್ಣನವರ ಹುಟ್ಟಿದ ನಂತರ ಅವನನ್ನು ಎತ್ತಿ ಮುದ್ದಾಡಿರುವೇನು. ತನ್ನ ತಾಯಿಯ ಬಾಣಂತಿಯ ಕಾರ್ಯವನ್ನು ಅಕ್ಕ ನಾಗಮ್ಮ ಮಾಡಿದ್ದೇನೆ ಎಂದು ಹೇಳಿಕೊಂಡಾಗ, ಅಕ್ಕ ನಾಗಮ್ಮ ಬಸವಣ್ಣನವರ ತಂಗಿ ಹೇಗಾಗುತ್ತಾಳೆ?

ಇಂತಹ ತಪ್ಪು ಕಲ್ಪನೆಗಳನ್ನು ಹುಟ್ಟಿಸುವ ವಿಚಾರದಿಂದ ಸಂಶೋಧಕರು ತಜ್ಞರು ತಮ್ಮ ಅನಿಸಿಕೆ ಅಭಿಮತಗಳನ್ನು ತಿದ್ದಿಕೊಳ್ಳಬೇಕು ಎಂದು ನನ್ನ ಸ್ಪಷ್ಟವಾದ ಅಭಿಮತವಾಗಿದೆ.

ಬಸವಣ್ಣನವರು ಹುಟ್ಟಿದ್ದು ಯಾವ ಸಂಶೋಧಕರು ಸ್ಪಷ್ಟವಾಗಿ ಹೇಳಲಾಗಿಲ್ಲ,

ಡಾ. ಪಿ ಬಿ ದೇಸಾಯಿಯವರು ತಮ್ಮ ಬಸವಣ್ಣನವರು ಮತ್ತು ಸಮಕಾಲೀನವರು ಎನ್ನುವ ಪುಸ್ತಕದಲ್ಲಿ ಬಸವಣ್ಣನವರ ಕಾಲ 1167 ರ ನಂತರ ಕಂಡು ಬರುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಾ ಬಸವಣ್ಣನವರು 1105 ರಲ್ಲಿ ಜನಿಸಿರಬಹುದು ಎಂಬ ಶಂಕೆಯನ್ನು ವ್ಯಕ್ತ ಪಡಿಸಿದ್ದಾರೆಯೇ ಹೊರತು ನಿರ್ದಿಷ್ಟವಾಗಿ 1105 ಎಂದು ಸಾಬೀತು ಪಡಿಸಿಲ್ಲ.

ಬಸವಣ್ಣನವರು 1105 ರಲ್ಲಿ ಹುಟ್ಟಿದ್ದಾರೆ ಎನ್ನುವವರಲ್ಲಿ ನನ್ನ ಕೆಲವು ಪ್ರಶ್ನೆಗಳು

ಬಸವಣ್ಣನವರು 1155 ರ ವರೆಗೆ ಎಲ್ಲಿದ್ದರು ಎಂದು ಯಾರು ದಾಖಲೆ ನೀಡುವುದಿಲ್ಲ,

ಒಂದುವೇಳೆ ಮಂಗಳವೇಡೆಯಲ್ಲಿ ಬಸವಣ್ಣನವರು ನಾಲ್ಕು ವರ್ಷ ಇದ್ದಾರೆ ಅಂತ ಅಂದುಕೊಂಡರೂ ಸಹಿತ ಬಾಗೇವಾಡಿ ಬಿಟ್ಟ ಮೇಲೆ ಕೂಡಲಸಂಗಮದಲ್ಲಿ 12 ವರುಷ, ನಾಲ್ಕು ವರ್ಷ ಮಂಗಳವೇಡೆ ಅಂದರೆ ಬಸವಣ್ಣನವರಿಗೆ 24 ವರ್ಷ ವಯಸ್ಸು ಅಂದ ಹಾಗೆ ಆಯ್ತು, ಡಾ ಪಿ ಬಿ ದೇಸಾಯಿಯವರು ತಮ್ಮ ಕೃತಿಯಲ್ಲಿ ಬಸವಣ್ಣನವರು ಕಲ್ಯಾಣಕ್ಕೆ ಬಂದದ್ದು 1155 ಮತ್ತು ಕಲ್ಯಾಣವನ್ನು ಬಿಟ್ಟಿದ್ದು 1167 ಎಂದು ಸ್ಪಷ್ಟವಾಗಿ ಹೇಳುತ್ತಾರೆ. 1130 ರಿಂದ 1155 ರವರೆಗೆ ಬಸವಣ್ಣನವರು ಎಲ್ಲಿದ್ದರು ಎಂದು ಗೊತ್ತಾಗುವುದಿಲ್ಲ.

ಇನ್ನೊಂದು ಸಂಗತಿ ಎಂದರೆ, ಅಕ್ಕನಾಗಮ್ಮ ಬಸವಣ್ಣನವರಿಗಿಂತ ಹನ್ನೆರಡು ವರ್ಷ ದೊಡ್ಡವರು ಎಂದು ಅಂದಾಜು ಮಾಡಲಾಗಿದೆ. ಬಸವಣ್ಣನವರು 63 ವರ್ಷ ಬದುಕಿದ್ದರೆ ಅವರಿಗಿಂತ ದೊಡ್ಡವಳಾದ ಅಕ್ಕನಾಗಮ್ಮ 75 ವರ್ಷದವರಾಗುತ್ತಾರೆ ಎಂದರ್ಥ. ಚೆನ್ನಬಸವಣ್ಣನವರು ತಮ್ಮ 24 ವಯಸ್ಸಿನಲ್ಲಿ ಉಳವಿಯಲ್ಲಿ ಐಕ್ಯರಾದರೆಂದು ತಿಳಿದು ಬರುತ್ತದೆ. ಹಾಗಿದ್ದರೆ ಅಕ್ಕನಾಗಮ್ಮ ತಮ್ಮ 51 ನೆಯ ವರ್ಷದಲ್ಲಿ ಚೆನ್ನಬಸವಣ್ಣನವ–ರಿಗೆ ಜನ್ಮ ನೀಡಿದರೆ ಎಂದು ಪ್ರಶ್ನೆ ಮಾಡಿಕೊಳ್ಳ ಬೇಕಾಗುತ್ತದೆ. ಇದು ಸಾಧ್ಯವಲ್ಲದ ಮಾತು. ಬಸವಣ್ಣ ಮತ್ತು ಚೆನ್ನಬಸವಣ್ಣನವರ ವಯಸ್ಸಿನ ಅಂತರವು 10 ರಿಂದ 12 ವರುಷಗಳು ಮಾತ್ರ. ಚೆನ್ನಬಸವಣ್ಣನವರು 24 ವರ್ಷಗಳು ಮಾತ್ರ ಬದುಕಿದ್ದರೆ ಬಸವಣ್ಣನವರು 36 ವರ್ಷಗಳ ವರೆಗೆ ಮಾತ್ರ ಬದುಕಿರುತ್ತಾರೆ. ಇದಕ್ಕೆ ಇನ್ನೊಂದು ಪುರಾವೆ ಎಂದರೆ ಬಸವಣ್ಣನವರು ಕೂಡಲಸಂಗಮದಲ್ಲಿ ಐಕ್ಯವಾದಾಗ ಅವರ ಮಗ ಬಾಲ ಸಂಗಯ್ಯ 8 ವರುಷದವನಿದ್ದನೆಂದು ತಿಳಿದು ಬರುತ್ತದೆ.

ಬಹುತೇಕ ಸಂಶೋಧಕರು ಬಸವಣ್ಣನವರು 1131 ಮತ್ತು 1132 ರಲ್ಲಿ ಹುಟ್ಟಿರಬಹುದು ಎಂದು ಅಭಿಮತ ವ್ಯಕ್ತ ಪಡಿಸುತ್ತಾರೆ, ಈ ಮೇಲಿನ ಎಲ್ಲಾ ಕಾರಣಗಳನ್ನು ಪರಿಗಣಿಸಿ ಬಸವಣ್ಣನವರು ಬದುಕಿದ್ದು ಕೇವಲ ಮೂವತ್ತಾರು ವರ್ಷಗಳು ಎಂದು ತಿಳಿಯಬಹುದು. ನಾನು ವ್ಯಕ್ತ ಪಡಿಸಿದ ವಿಚಾರವೇ ಅಂತಿಮವಲ್ಲ. ಬೇರೆ ಸಂಶೋಧನೆ ಆಕರ ಸಮೇತ ನೀಡಿದಲ್ಲಿ ಸ್ವಾಗತಾರ್ಹ

**ಲೇಖನ**
**– ಡಾ. ಶಶಿಕಾಂತ ಪಟ್ಟಣ.**
**ರಾಮದುರ್ಗ – ಪುಣೆ**
**ಮೊ: 9552002338**



# ಮಕ್ಕಳ ಸುಪ್ತ ಪ್ರತಿಭೆ ಹೊರತರಲು ಸ್ಪರ್ಧೆಗಳು ಸಹಕಾರಿ

**ಉದಯರಶ್ಮಿ ದಿನಪತ್ರಿಕೆ**



**ವಿಜಯಪುರದಲ್ಲಿ 'ಅಪ್ಪ ಫೌಂಡೇಶನ್' ವತಿಯಿಂದ ಶಾಲಾ ಮಕ್ಕಳಿಗಾಗಿ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ಕಲಾವಿದ ಶ್ರೀಶೈಲ ಹೂಗಾರ ಅಭಿಮತ**

ವಿಜಯಪುರ: ಇಲ್ಲಿನ ಸರಕಾರಿ ಆರ್ಟ್ ಗ್ಯಾಲರಿಯಲ್ಲಿ ಗಣೇಶ ಚತುರ್ಥಿಯ ಅಂಗವಾಗಿ 'ಅಪ್ಪ ಫೌಂಡೇಶನ್' ವತಿಯಿಂದ ಶಾಲಾ ಮಕ್ಕಳಿಗಾಗಿ ಹಮ್ಮಿಕೊಳ್ಳಲಾಗಿದ್ದ ಭವ್ಯ ಚಿತ್ರಕಲಾ ಸ್ಪರ್ಧೆಯು ಯಶಸ್ವಿಯಾಗಿ ಜರುಗಿತು.

ಈ ಸ್ಪರ್ಧೆಯನ್ನು ಪ್ರಮುಖರಾದ ಆನಂದ ಝುಂಡೆ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರು ಹಾಗೂ ಕಲಾವಿದ ಶ್ರೀಶೈಲ ಹೂಗಾರ ಅವರು ಜಂಟಿಯಾಗಿ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯನ್ನು ಹೊರತರಲು ಇಂತಹ ಸ್ಪರ್ಧೆಗಳು ಸಹಕಾರಿಯಾಗಲಿವೆ. ಹಬ್ಬದ ದಿನಗಳಲ್ಲಿ ಇಂತಹ ಸೃಜನಶೀಲ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

ವಿವಿಧ ಶಾಲೆಗಳಿಂದ ಆಗಮಿಸಿದ್ದ ಸುಮಾರು 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡು, ತಮ್ಮ ಕುಂಚದ ಮೂಲಕ ಆಕರ್ಷಕ ಚಿತ್ರಗಳನ್ನು ಬಿಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಪ್ಪ ಫೌಂಡೇಶನ್ ಅಧ್ಯಕ್ಷ ಎಸ್. ಟಿ. ಮಲಗೊಂಡ ವಹಿಸಿದ್ದರು. ಕಾರ್ಯಕ್ರಮದಲ್ಲಿ ಫೌಂಡೇಶನ್ ಸದಸ್ಯರುಗಳಾದ ಬಿ. ಪಿ. ಬಿರಾದಾರ, ಸಿದ್ದಣ್ಣ ಚಿಂಚೋಳಿ, ಗೌರೀಶ್ ಮಲಗೊಂಡ, ಪ್ರಜ್ವಲ್ ಬಿರಾದಾರ ಉಪಸ್ಥಿತರಿದ್ದರು.

ಸ್ಪರ್ಧೆಯ ತೀರ್ಪುಗಾರರಾಗಿ ಮತ್ತು ಮಾರ್ಗದರ್ಶಕರಾಗಿ ಚಿತ್ರಕಲಾ ಶಿಕ್ಷಕರುಗಳಾದ ಶಿವಾನಂದ ಅಥಣಿ, ಎಸ್. ವಿ. ಕಾಂಬ್ಳೆ, ಮದನ ವಗ್ಯಾನವರ, ಕಮಲೇಶ ಭಜಂತ್ರಿ ಹಾಗೂ ಸಲೀಮ್ ವಾಲಿಕಾರ ಅವರು ಕಾರ್ಯನಿರ್ವಹಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಶಾಲೆಗಳ ಶಿಕ್ಷಕರು ಹಾಗೂ ನೂರಾರು ಪಾಲಕರು ಉಪಸ್ಥಿತರಿದ್ದರು. ವಿಜೇತರ ಘೋಷಣೆ ಮತ್ತು ಚಿತ್ರಕಲಾ ಪ್ರದರ್ಶನ: ಸ್ಪರ್ಧೆಯ ಫಲಿತಾಂಶ ಹಾಗೂ ವಿಜೇತರ ಹೆಸರುಗಳನ್ನು ಸೆ.20 ರಂದು ಅಧಿಕೃತವಾಗಿ ಪ್ರಕಟಿಸಲಾಗುವುದು. ಅಂದು ಸ್ಪರ್ಧೆಯಲ್ಲಿ ಮಕ್ಕಳು ರಚಿಸಿದ ಎಲ್ಲಾ ಆಕರ್ಷಕ ಚಿತ್ರಗಳನ್ನು ಸಾರ್ವಜನಿಕ ವೀಕ್ಷಣೆಗಾಗಿ ಸರಕಾರಿ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನಕ್ಕೆ ಇಡಲಾಗುವುದು. ಸಾರ್ವಜನಿ ಕರು, ಕಲಾಭಿಮಾನಿಗಳು ಹಾಗೂ ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪ್ರದರ್ಶನವನ್ನು ವೀಕ್ಷಿಸಿ, ಪುಟ್ಟ ಮಕ್ಕಳ ಸೃಜನಶೀಲತೆಗೆ ಬೆನ್ನುತಟ್ಟಿ ಪ್ರೋತ್ಸಾಹಿಸಬೇಕೆಂದು ಅಪ್ಪ ಫೌಂಡೇಶನ್ ಪದಾಧಿಕಾರಿಗಳು ವಿನಂತಿಸಿದ್ದಾರೆ.

# ಭಕ್ತಿಭಾವದ ಹೊನಲಿನಲ್ಲಿ ಶ್ರೀ ಅಪ್ಪಯ್ಯ ಸ್ವಾಮಿ ಜಾತ್ರೆ ಸಂಪನ್ನ

**ಉದಯರಶ್ಮಿ ದಿನಪತ್ರಿಕೆ**



ಅಥಣಿ: ತಾಲೂಕಿನ ಬಳವಾಡ ಗ್ರಾಮದಲ್ಲಿ ಪವಿತ್ರ ಶ್ರಾವಣ ಮಾಸದ ಅಂಗವಾಗಿ ಗ್ರಾಮದ ಆರಾಧ್ಯ ದೈವ ಶ್ರೀ ಅಪ್ಪಯ್ಯ ಸ್ವಾಮಿಯ ಜಾತ್ರಾ ಮಹೋತ್ಸವವು ಭಕ್ತಿಭಾವ ಹಾಗೂ ಸಂಭ್ರಮದ ವಾತಾವರಣದಲ್ಲಿ ಅದ್ದೂ–ರಿಯಾಗಿ ಜರುಗಿತು.

ಕರ್ನಾಟಕದ ವಿವಿಧ ಭಾಗಗಳಿಂದ ಮಾತ್ರವಲ್ಲದೆ ನೆರೆಯ ಮಹಾರಾಷ್ಟ್ರ ರಾಜ್ಯದಿಂದಲೂ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಶ್ರೀ ಅಪ್ಪಯ್ಯ ಸ್ವಾಮಿಯ ದರ್ಶನ ಪಡೆದು ಪುನೀತರಾದರು.

ಶ್ರಾವಣ ಮಾಸದ ಒಂದು ತಿಂಗಳ ಪರ್ಯಂತ ಶ್ರೀ ಅಪ್ಪಯ್ಯ ಸ್ವಾಮಿಯ ಮಠದ ಆಶ್ರಯದಲ್ಲಿ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನ ಜೀವನ ದರ್ಶನ ಕುರಿತ ಪ್ರವಚನ ಕಾರ್ಯಕ್ರಮವನ್ನು ಡಾ. ವಿವೇಕಾನಂದಮಹಾಸ್ವಾಮಿಗಳು ನಡೆಸಿಕೊಟ್ಟರು. ಇದರೊಂದಿಗೆ ಬುತ್ತಿ ಜಾತ್ರೆ ಸೇರಿದಂತೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿ–ಕ ಕಾರ್ಯಕ್ರಮಗಳು ಶ್ರಾವಣ ಮಾಸದ ಉತ್ಸವಕ್ಕೆ ಮತ್ತಷ್ಟು ಮೆರುಗು ನೀಡಿದವು.

ಜಾತ್ರೆಯ ಪ್ರಮುಖ ಆಕರ್ಷಣೆಯಾಗಿ ಶ್ರೀ ಅಪ್ಪಯ್ಯ ಸ್ವಾಮಿಯ ಪಲ್ಲಕ್ಕಿ ಮೆರವಣಿಗೆ ನಡೆಯಿತು. ಡೊಳ್ಳು, ನಗಾರಿ, ಕರಡಿ ಕುಣಿತ ಸೇರಿದಂತೆ ವಿವಿಧ ವಾದ್ಯಮೇಳಗಳ ನಾದದೊಂದಿಗೆ ಪಲ್ಲಕ್ಕಿ ಮೆರವಣಿಗೆ ಸಾಗಿದಾಗ ಭಕ್ತರು ಭಕ್ತಿಪರವಶರಾದರು.

ಮಹಿಳೆಯರು ಕುಂಭಗಳನ್ನು ಹೊತ್ತು ಕುಂಭಮೇಳದಲ್ಲಿ ಪಾಲ್ಗೊಂಡಿದ್ದು ಜಾತ್ರೆಯ ವೈಭವವನ್ನು ಮತ್ತಷ್ಟು ಹೆಚ್ಚಿಸಿತು. ಗ್ರಾಮದೆಲ್ಲೆಡೆ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಜಾತ್ರೆಯಲ್ಲಿ ರಾಚೋಟೇಶ್ವರ ಶ್ರೀಗಳು, ಮುರುಘೇಂದ್ರ ಸ್ವಾಮಿಗಳು, ಚಿಕ್ಕ ಗುರುನಂಜೇಶ್ವರ ಮಹಾಸ್ವಾಮಿಗಳು, ಭರತನೂರು ಹಾಗೂ ಶ್ರೀ ಅಪ್ಪಯ್ಯ ಸ್ವಾಮಿ ಮಠದ ಭಕ್ತರು ಗ್ರಾಮಸ್ಥರು ಮಹಿಳೆಯರು ಯುವಕರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿಭಾಗವಹಿಸಿದ್ದರು.

"ಬಳವಾಡದ ಶ್ರೀ ಅಪ್ಪಯ್ಯ ಸ್ವಾಮಿಯ ಮಠವು ಈ ಭಾಗದ ಜನರ ಧಾರ್ಮಿಕ ಹಾಗೂ ಆಧ್ಯಾತ್ಮಿಕ ನಂಬಿಕೆಯ ಪ್ರಮುಖ ಕೇಂದ್ರವಾಗಿದೆ. ಶತಮಾನಗಳ ಭಕ್ತಿ ಪರಂಪರೆಯನ್ನು ಮುಂದುವರಿಸಿಕೊಂಡು ಮಠವು ಧಾರ್ಮಿಕ ಚಟುವಟಿಕೆಗಳ ಜೊತೆಗೆ ಸಮಾಜದಲ್ಲಿ ಸಂಸ್ಕಾರ ಸೇವೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ."

**ಚಿದಾನಂದ ಲಕ್ಷ್ಮಣ ಸವದಿ**
ಯುವ ನಾಯಕರು, ಅಥಣಿ

# ಶಿಕ್ಷಕ ಜಿ.ಎಂ.ಕೋಟ್ಯಾಳ ಗೆ ಆದರ್ಶ ಶಿಕ್ಷಕ ಪ್ರಶಸ್ತಿ

**ಉದಯರಶ್ಮಿ ದಿನಪತ್ರಿಕೆ**



ಗದಗ: ನಗರದ ತೋಂಟದಾರ್ಯ ಮಠದ ಆವರಣದಲ್ಲಿ ಜರುಗಿದ 2814 ನೇ ಶಿವಾನುಭವ ಕಾರ್ಯಕ್ರಮದಲ್ಲಿ ಲಿಂಗಾಯತ ಪ್ರಗತಿಶೀಲ ಸಂಘದ ಆಶ್ರಯದಲ್ಲಿ ಶಿಕ್ಷಕರ ದಿನಾಚರಣೆ ನಿಮಿತ್ಯ ಹಮ್ಮಿಕೊಂಡಿದ್ದ ಆದರ್ಶ ಶಿಕ್ಷಕ ಪ್ರಶಸ್ತಿ–2026 ಪ್ರಧಾನ ಸಮಾರಂಭದಲ್ಲಿ ಪುರಸ್ಕೃತ ಸಾಧಕ ಆಲಮಟ್ಟಿಯ ಪ್ರೌಢಶಾಲಾ ಶಿಕ್ಷಕ ಜಿ.ಎಂ. ಕೋಟ್ಯಾಳ ಅವರಿಗೆ ಸನ್ಮಾನಿಸಿ ಗೌರವಿಸಿದರು.

ನಾಡೋಜ ಡಾ.ಚೆನ್ನವೀರ ಕಣವಿ ಇವರ ತಂದೆಯವರಾದ ಲಿಂ, ಸಕ್ರಪ್ಪ ಕಣವಿ ಸ್ಮರಣಾಥ–ರ್ ಕೊಡಮಾಡಿದ ಆದರ್ಶ ಶಿಕ್ಷಕ ಪ್ರಶಸ್ತಿ –2026 ಗೆ ಭಾಜನರಾಗಿರುವ ವಿಜಯಪುರ ಜಿಲ್ಲೆಯ ಆಲಮಟ್ಟಿ ರಾವಬಹದ್ದೂರ ಡಾ. ಫ.ಗು.ಹಳಕಟ್ಟಿ (ಆರ್.ಬಿ.ಪಿ.ಜಿ) ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಜಿ.ಎಂ.ಕೋಟ್ಯಾಳ ಅವರಿಗೆ ತೋಂಟದ ಡಾ. ಸಿದ್ದರಾಮ ಮಹಾಸ್ವಾಮಿಗಳು ಸೇರಿದಂತೆ ಗಣ್ಯ ಮಹನೀಯರ ಸಮ್ಮುಖದಲ್ಲಿ ಪ್ರಶಸ್ತಿ ಪತ್ರ, ಬಿನ್ನವತ್ತಳೆ ನೀಡಿ ಸನ್ಮಾನಿಸಿದರು.

# ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚಾರಣೆ

ಬೆಂಗಳೂರು:ಸಿಎಂ ಡಿ ಕೆ ಶಿವಕುಮಾರ್ ಅವರು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಮಂಗಳವಾರ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಉದ್ಘಾಟಿಸಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಡಾ ಬಿ ಆರ್ ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಂ ಅವರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿದರು. ಸಭಿಕರ ಜತೆ ಸಂವಿಧಾನ ಪೀಠಿಕೆ ಓದಿದರು. ನಂತರ ಯುವ ಸಂಸತ್ ಸಭೆ ಕಾರ್ಯಕ್ರಮದ ಲೋಗೋ ಅನಾವರಣಗೊಳಿಸಿದರು. ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಾ. ಜಿ ಪರಮೇಶ್ವರ, ಸಚಿವರಾದ ಕೆ ಎಚ್ ಮುನಿಯಪ್ಪ, ಶಿವರಾಜ್ ತಂಗಡಗಿ, ರಿಜ್ವಾನ್ ಅರ್ಷದ್, ಮತ್ತಿತರರು ಉಪಸ್ಥಿತರಿದ್ದರು.

# ನ್ಯಾಷನಲ್ ಕ್ರಿಕೆಟ್ ಸ್ಪರ್ಧೆ: ಬಾಲಕಿ ಆರಾಧ್ಯ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಉತ್ತರ ಪ್ರದೇಶದ ಗೋರಕಪುರದಲ್ಲಿ ನಡೆದ ಅಂಡರ್-14 ಬಾಲಕಿಂ-ುರ ವಿಭಾಗದ ಕ್ರಿಕೆಟ್ ಸ್ಪರ್ಧೆಯಲ್ಲಿ ರಾಜ್ಯವನ್ನು ಪ್ರತಿನಿಧಿಸಿ, ಇಂಡಿ ಡಿವೈಎಸ್ಪಿ ಸದಾಶಿವ ಕಟ್ಟಿಮನಿ ಅವರ ಸುಪುತ್ರಿ ಆರಾಧ್ಯ ಕಟ್ಟಿಮನಿ 'ದ್ವಿತೀಯ ಸ್ಥಾನ'ದ ಗೆಲುವು ಸಾಧಿಸುವ ಮೂಲಕ 'ನ್ಯಾಷನಲ್ ಕ್ರಿಕೆಟ್ ಸ್ಪರ್ಧೆ'ಗೆ ಆಯ್ಕೆಯಾಗಿದ್ದಾಳೆ.

ಮೂಲತಃ ಚಡಚಣ ತಾಲ್ಲೂಕಿನ ಜೀರಂಕಲಗಿ ಗ್ರಾಮದ ಬಾಲಕಿ ಆರಾಧ್ಯ ಕಟ್ಟಿಮನಿ ಉಡುಪಿಯ ಶಾರದಾ ರೆಸಿಡೆನ್ಸಿ ಸ್ಕೂಲ್ ನಲ್ಲಿ ಎಂಟನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ.

ಇವಳ ರಾಷ್ಟ್ರಮಟ್ಟದ ಸಾಧನೆಗೆ ಶಾಲಾ ಆಡಳಿತ ಮಂಡಳಿ, ಪೋಷಕರು ಹಾಗೂ ಚಡಚಣ ತಾಲೂಕು ಶ್ರೀ ಮಹಾ ಶಿವಶರಣ ಹರಳಯ್ಯ ಸಮುದಾಯವು ಸಂತಸ ವ್ಯಕ್ತಪಡಿಸಿ, ಅಭಿನಂದನೆ ತಿಳಿಸಿದೆ.



# ಶ್ರೀ ಪವನ ಸೌಹಾರ್ದ ಸಹಕಾರಿ ಸಂಘದ ಸಾಮಾನ್ಯ ಸಭೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಶ್ರೀ ಪವನ ಸೌಹಾರ್ದ ಸಹಕಾರಿ ಸಂಘ ನಿ. ಇದರ 6ನೇ ವಾರ್ಷಿಕ ಸರ್ವ ಸಾಮಾನ್ಯ ಸಭೆ ಇತ್ತೀಚೆಗೆ ನಗರದ ಶ್ರೀ ಕಾಳಿಕಾದೇವಿ ಕಲ್ಯಾಣ ಮಂಟಪದಲ್ಲಿ ಜರುಗಿತು.

ಸಭೆಯ ಉದ್ಘಾಟನೆಯನ್ನು ಶ್ರೀ ಶಾಂತೇಶ್ವರ ವಿವಿಧೋದ್ದೇಶಗಳ ಸಹಕಾರಿ ಸಂಘದ ಆಡಳಿತಾಧಿಕಾರಿ ಸುಭಾಸ ಇಂಡಿ, ಸಿ.ಎ. ಇವರು ನೆರವೇರಿಸಿ ಮಾತನಾಡುತ್ತಾ, ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಆಡಳಿತ ಮಂಡಳಿಯ ನಿರ್ದೇಶಕರುಗಳ ಹಾಗೂ ಸದಸ್ಯರ ಸಹಕಾರ ಅತಿ ಅವಶ್ಯಕ. ಕಳೆದ 6 ವರ್ಷಗಳಿಂದ ಶ್ರೀ ಪವನ ಸೌಹಾರ್ದ ಸಹಕಾರಿ ಸಂಘವು ಅ ವರ್ಗದಲ್ಲಿದೆ ಎಂದು ಹೇಳಿದರು. ಸೌಹಾರ್ದ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಶಿವಾನಂದ ಎಸ್. ಢವಳಗಿ ಇವರು ಸನ್ 2025-26ನೇ ಸಾಲಿನ ವರದಿ ವಾಚನ ಮಾಡಿದರು.

ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷ ಮನೋಹರ ಎಸ್. ಹೇರಲಗಿ, ಆಡಳಿತ ಮಂಡಳಿಯ ನಿರ್ದೇಶಕರುಗಳಾದ ಬಸವರಾಜ ಢವಳಗಿ, ಓಂಪ್ರಕಾಶ ಗಿರಗಾಂವಕರ, ಮಹಾದೇವ ಕೋರಿಶೆಟ್ಟಿ, ಅಮಿತ ಬೀಳಗಿ, ಅಕ್ಷಯ ಬೀಳಗಿ, ಬಸಣ್ಣಾ ಶೆಳ್ಳಗಿ, ಶ್ರೀಮತಿ ಶಕುಂತಲಾ ಎಸ್. ಢವಳಗಿ, ಶ್ರೀಮತಿ ರೇಖಾ ಆರ್. ಬೀಳಗಿ, ವಿಶ್ವನಾಥ ಉಮದಿ, ರಮೇಶ ಪವಾರ, ಮೋಹನ ಚಿತ್ರಗಾರ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಸಹಾಯಕ ವ್ಯವಸ್ಥಾಪಕ

ಪ್ರೀತಿ ಬಿರಾದಾರ, ಸಿಬ್ಬಂದಿಗಳಾದ ಮೇಘಾ ಕುಲಕರ್ಣಿ, ರುದ್ರಪ್ಪ ಕಟಗೇರಿ, ಪ್ರಸಾದ ಹೇರಲಗಿ, ಅರವಿಂದ ರಜಪೂತ, ಶ್ರೀಶೈಲ ಕೋವಳ್ಳಿ, ರತ್ನಾಕರ ಪಾಟೀಲ ಬಸವಂತರಾಯ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

ಉಪಾಧ್ಯಕ್ಷ ಉಮೇಶ ಎಸ್. ಕೌಲಗಿ ವಂದನಾರ್ಪಣೆ ನಡೆಸಿಕೊಟ್ಟರು. ರಮೇಶ ಬೀಳಗಿ ಕಾರ್ಯಕ್ರಮ ನಿರೂಪಿಸಿದರು.



# ಎಲ್ಲ ರಂಗಗಳಲ್ಲೂ ಕ್ರಿಯಾಶೀಲವಾಗಿರುವ ಮಹಿಳೆ :ಬಸವಲಿಂಗ ಶ್ರೀ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಮಾತೃಸ್ವರೂಪಿ ಮಹಿಳೆ ಇಂದು ಸಮಾಜದ ಎಲ್ಲ ರಂಗಗಳಲ್ಲೂ ಕ್ರೀಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದ್ದಾಳೆ ಎಂದು ಶ್ರೀಮಹಾಂತೇಶ್ವರ ಸಂಸ್ಥಾನ ಹಿರೇಮಠದ ಬಸವಲಿಂಗ ಶ್ರೀ ಹೇಳಿದರು.

ತಾಲ್ಲೂಕಿನ ಕೋರವಾರ ಗ್ರಾಮದಲ್ಲಿ ಭಾನುವಾರ ಶ್ರಾವಣಮಾಸ, ಗುರುಚನ್ನಬಸವಶ್ರೀಗಳ 38ನೇ ಪುಣ್ಯ ಸ್ಮರಣೋತ್ಸವ ಅಂಗವಾಗಿ ಜರುಗಿದ ಶ್ರೀಶರಣಬಸವೇಶ್ವರರ ಮಹಾಪುರಾಣ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.

ಮಹಿಳೆ ಮಾತೆ, ಮಡದಿ, ಸಹೋದ-ರಿಯ ರೂಪದಲ್ಲಿ ಜೀವನದ ಪ್ರತಿಕ್ಷಣ ಮಾನವನ ಉಸಿರಾಗಿದ್ದಾಳೆ. ಅಂತೆಯೇ ಇಂದು ಮಹಿಳಾ ಪ್ರತಿನಿಧಿಗಳ ಸನ್ಮಾನ ಎಂದರು.

ದೇವರಹಿಪ್ಪರಗಿ ಜಡಿಮಠದ ಜಡಿಸಿದ್ಧೇಶ್ವರಶ್ರೀ, ಸ್ಥಳೀಯ ಚೌಕಿಮಠದ ಅಭಿನವ ಮುರುಗೇಂದ್ರ ಶ್ರೀ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಪ್ರವಚನಕಾರ ಮಡಿವಾಳಯ್ಯಶಾಸ್ತ್ರೀ ಗದ್ದಗಿಮಠ (ಜೇರಟಗಿ), ಗಾಯಕ ಯಶವಂತ ಬಡಿಗೇರ, ತಬಲಾವಾದಕ ರಾಜಶೇಖರ ಕಟ್ಟಿಸಂಗಾವಿ ಸಂಗೀತ ಸೇವೆ ನೀಡಿದರು. ಬಸವಣ್ಣ ಜಾಲವಾದಿ, ನಿಂಗಣ್ಣ ಶರಣರು, ಸಂಗಪ್ಪಗೌಡ ಬಿರಾದಾರ, ಗುಂಡಪ್ಪಗೌಡ ಬೋರಾವತ, ಬಾಪುಗೌಡ ಬಿರಾದಾರ, ಸಿದ್ದನಗೌಡ ಬಿರಾದಾರ, ಅಪ್ಪುಗೌಡ ಪೋಲಿಸ್ ಪಾಟೀಲ, ಮಾಂತಗೌಡ ಸುಂಬಡ, ರಾಜಶೇಖರ್ ಛಾಯಾಗೋಳ, ಗುರಣ್ಣ ಅಂಗಡಿ, ಸಾಹೇಬಗೌಡ ಸಂಗಣ್ಣಿ, ಭೀಮನಗೌಡ ಕುಳೇಕುಮಟಗಿ, ನಾನಾಗೌಡ ಬೋರಾವತ, ದಯಾನಂದ ಗುತ್ತರಗಿಮಠ, ಮಲ್ಲನಗೌಡ ಬಿರಾದಾರ, ಸೋಮಶೇಖರ ಹಿರೇಮಠ, ಮಲ್ಲಿಕಾರ್ಜುನ ಕಲಬುರಗಿ, ಕಾಶಿಲಿಂಗಯ್ಯ ಕುರನಳ್ಳಿಮಠ, ಗುರುಪಾದ ಹುಣಸಗಿ, ಚನ್ನಪ್ಪಗೌಡ ಬಿರಾದಾರ(ಹಂದಿಗನೂರ) ದಾಸೋಹದ ವ್ಯವಸ್ಥಾಪಕರಾದ ವಿದ್ಯಾನಂದ ಹಿರೇಮಠ, ಮಾಂತಯ್ಯ ಹಿರೇಮಠ, ಬಸಯ್ಯ ಹೊಸಮಠ, ರೇವಣಸಿದ್ದಯ್ಯ ಹಿರೇಮಠ ಮಹಿಳಾ ಸಂಘದ ಪದಾಧಿಕಾರಿಗಳಾದ ಮಹಾದೇವಿ ಸುಂಬಡ, ನಾಗಮ್ಮ ಯತ್ನಾಳ, ಬಸಮ್ಮ ಹೊಸಮಠ, ಸುನಂದಾ ಭದ್ರಗೊಂಡ, ಸಂಗೀತಾ ಹೊಸಮಠ, ರೋಹಿಣಿ ಹುಣಸಗಿ, ಗುರುಬಾಯಿ ಜಾಲವಾದಿ, ಶಾರದಾ ಹುಣಸಗಿ, ಗುರುಬಾಯಿ ಜಂಬುಗೋಳ ಇದ್ದರು.

# ಧರ್ಮಮಾರ್ಗದಲ್ಲಿ ನಡೆದು ದೇವರ ಕೃಪೆಗೆ ಪಾತ್ರರಾಗಿ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಶ್ರೀ ವೀರಭದ್ರೇಶ್ವರ ಜಯಂತ್ಯುತ್ಸವ ನಿಮಿತ್ಯ ಮಠಾಧೀಶರ ನೇತೃತ್ವದಲ್ಲಿ ಪೂಜೆ ಸಲ್ಲಿಸಿ ವೀರಭದ್ರೇಶ್ವರ ಜಯಂತಿ ಆಚರಿಸಲಾಯಿತು.

ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಮಂಗಳವಾರ ಸೇರಿದ ಭಕ್ತಮಂಡಳಿ ಹಿಂದೂ ಧರ್ಮ ಪರಂಪರೆಯ ಅದರಲ್ಲೂ ವೀರಶೈವ ಲಿಂಗಾಯತ ಸಮುದಾಯ ಪೂಜಿತ ವೀರಗೋತ್ರ ಪುರುಷ ಶ್ರೀವೀರಭದ್ರೇಶ್ವರ ದೇವರ ಪ್ರತಿಮೆಗೆ ಶಾಸ್ತ್ರೋಕ್ತವಾಗಿ ಅಭಿಷೇಕ, ಮಹಾಮಂಗಳಾರತಿ ನೆರವೇರಿಸಿ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಪರದೇಶಿಮಠದಶ್ರೀ, ತಾಲ್ಲೂಕು ಘಟಕದ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಸಿ.ಕೆ. ಕುದರಿ, ಜಂಗಮಾಭಿವೃದ್ಧಿ ಸಂಘದ ಅಧ್ಯಕ್ಷ ಸೋಮಶೇಖರ ಹಿರೇಮಠ, ಸಿದ್ದು ಆನಂದಿ, ಪಿ.ಜಿ.ಹಿರೇಮಠ, ಮಾತನಾಡಿ, ಪುರಾಣಗಳ ಪ್ರಕಾರ ದಕ್ಷನ ಸಂಹಾರಕ್ಕಾಗಿ ಶಿವನ ಅಂಶದಿಂದ ಅವತರಿಸಿ ಶಿವಭಕ್ತರನ್ನು ಸಂರಕ್ಷಿಸುತ್ತಿರುವ ವೀರಭದ್ರೇಶ್ವರ ದೇವರು ವೀರಶೈವ ಲಿಂಗಾಯತ ಪರಂಪರೆಯಲ್ಲಿ ಪ್ರಮುಖ ನಾಗಿದ್ದಾನೆ. ವೀರ, ನಂದಿ, ಭೃಂಗಿ, ವೃಷಭ, ಸ್ಕಂದ ಎಂಬ ಪಂಚಗೋತ್ರ ಪುರುಷರು ಜನಜನಿತರಾಗಿದ್ದು, ಇವರಲ್ಲಿ ವೀರಭದ್ರೇಶ್ವರ ಪ್ರಥಮ ಪುರುಷನಾಗಿದ್ದಾನೆ. ಇಂದು ನಾವೆಲ್ಲ ಭಕ್ತರು ಧರ್ಮಮಾರ್ಗದಲ್ಲಿ ನಡೆದು ಅವನ ಕೃಪೆಗೆ ಪಾತ್ರರಾಗಬೇಕು ಎಂದರು. ವಿಜಯಲಕ್ಷ್ಮಿ ಪಾಟೀಲ, ಇಂದ್ರಾ ಬಾಯಿ ಕುದರಿ, ಗಂಗಾಬಾಯಿ ಮಣೂರ, ಅಜ್ಜಯ್ಯ ಹಿರೇಮಠ, ಯಲಗೂರೇಶ ದೇವೂರ, ಕೆ.ಎಸ್.ಕೋರಿ, ಆನಂದ ಜಡಿಮಠ, ರಮೇಶ ಮಶಾನವರ, ರಾಮಯ್ಯ ನಾಶಿಮಠ, ರಮೇಶ ಮಾಳನೂರ, ವಿನೋದ ನಾಶಿಮಠ, ಶರಣಗೌಡ ಅಂಗಡಿ, ಭೀಮರಾಯ ತೆಗನೂರ, ಶಿವಪ್ಪ ವಸ್ತ್ರದ, ಪ್ರಭು ಮಾಕಾ, ಭದ್ರಯ್ಯ ಮಲ್ಲಿಕಾರ್ಜುನಮಠ, ಮಲ್ಲಯ್ಯ ನಂದಿಕೋಲ, ದಾನು ಯರನಾಳ, ಶ್ರೀನಿವಾಸ ಮಣೂರ, ಬಸವರಾಜ ಬಾಗೇವಾಡಿ ಸೇರಿದಂತೆ ಇತರರು ಇದ್ದರು.

# ಧಾರ್ಮಿಕ ಪರಂಪರೆ ಮತ್ತು ಆಧ್ಯಾತ್ಮಿಕತೆಯಲ್ಲಿ ಭಾರತ ಶ್ರೇಷ್ಠ

## ಕೈಗಾರಿಕೆ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಧಾರ್ಮಿಕ ಪರಂಪರೆ ಮತ್ತು ಆದ-್ಯಾತ್ಮಿಕತೆಯಲ್ಲಿ ಭಾರತ ದೇಶ ಜಗತ್ತಿನಲ್ಲಿಯೇ ಶ್ರೇಷ್ಠವಾಗಿದೆ ಎಂದು ಕೈಗಾರಿಕೆ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರು ಹೇಳಿದ್ದಾರೆ.

ಸೋಮವಾರ ಬಬಲೇಶ್ವರ ತಾಲೂಕಿನ ಬೆಳ್ಳುಬ್ಬಿ ಗ್ರಾಮದ ಮಳೆ ಮಲ್ಲೇಶ್ವರ ದೇವಸ್ಥಾನದಲ್ಲಿ ನಡೆದ ಅಜಾತ ನಾಗಲಿಂಗ ಮಹಾಸ್ವಾಮಿಗಳ ಮಹಾ ಪುರಾಣ ಮತ್ತು ಭಜನಾ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಭಕ್ತಿ, ಜ್ಞಾನ ಮತ್ತು ಸಂಸ್ಕೃತಿಯ ಸಂಗಮವಾದ ಇಂಥ ಕಾರ್ಯಕ್ರಮಗಳು ನಮ್ಮೊಳಗಿನ ಮಾನವೀಯತೆಯನ್ನು ಜಾಗೃತಗೊಳಿಸಿ, ಧರ್ಮದ ಹಾದಿಯಲ್ಲಿ ಮುನ್ನಡೆಯಲು ಪ್ರೇರಣೆ ನೀಡುತ್ತವೆ. ಪುರಾಣ, ಪ್ರವಚನಗಳಿಂದ ನಮಗೆ ಹಿಂದಿನ ಇತಿಹಾಸ ಗೊತ್ತಾಗುತ್ತದೆ. ಇದರಲ್ಲಿ ಒಳ್ಳೆಯದು ಹಾಗೂ ಕೆಟ್ಟದು ಎರಡೂ ಇರುತ್ತದೆ. ಇಂಥ ಕಾರ್ಯಕ್ರಮಗಳಲ್ಲಿ ಎಲ್ಲರೂ ಭಾಗಿಯಾಗಿ ಅನೇಕತೆಯಲ್ಲಿ ಏಕತೆ ಸಾಧಿಸಬೇಕು.

ಶರಣರು ಅನುಸರಿಸಿದ ಅನುಭವ ಮಂಟಪದ ಪರಿಕಲ್ಪನೆ ಪ್ರತಿ ಊರಿನಲ್ಲೂ ಕೈಗೂಡಬೇಕು. ಪ್ರತಿ ಗ್ರಾಮವೂ ಒಂದೊಂದು ಅನುಭವ ಮಂಟಪದಂತೆ ಎಲ್ಲ ಜಾತಿ, ವರ್ಗ, ಜನಾಂಗಗಳನ್ನು ಒಳಗೊಂಡಿರುತ್ತವೆ. ಎಲ್ಲ ಧರ್ಮಗಳವರು ಒಟ್ಟಾಗಿ ಬದುಕಬೇಕು. ಗ್ರಾಮಗಳಲ್ಲಿ ಹಿಂದೂ ಮುಸ್ಲಿಮರಲ್ಲಿ ಏಕತೆ ಇದ್ದರೆ ಶಾಂತಿ ನೆಲೆಸುತ್ತದೆ ಎಂದು ಅವರು ಹೇಳಿದರು.

ಗಣಲಿಂಗ ದೇವರು ಹಿರೇಮಠ, ಆಸಂಗಿ ಹಿರೇಮಠದ ಶ್ರೀಗಳು, ಚಂದ್ರಶೇಖರ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು.

ಈ ಸಂದರ್ಭದಲ್ಲಿ ನ್ಯಾಯವಾದಿ ಶ್ರೀನಿವಾಸ ಕೊಂಡಗೂಳಿ, ಬಸವರಾಜ ದೇಸಾಯಿ, ರಮೇಶ ಬಶೆಟ್ಟಿ, ಶಿವಾನಂದ ನ್ಯಾಮಗೌಡ, ಬಸವರಾಜ ಜೈನಾಪುರ ಮುಂತಾದವರು ಉಪಸ್ಥಿತರಿದ್ದರು.

# ಪ್ರಜಾಪ್ರಭುತ್ವದ ಯಶಸ್ಸು ಯುವಜನರ ಹೊಣೆ :ಮ್ಯಾಗೇರಿ

■ ಉದಯರಶ್ಮಿ ದಿನಪತ್ರಿಕೆ



ಕೊಲ್ಹಾರ: ಪ್ರಜಾಪ್ರಭುತ್ವದ ತಳಹದಿಯಾಗಿರುವ ಮತದಾನದ ಹಕ್ಕಿನ ಮಹತ್ವವನ್ನು ಯುವಜನರು ಅರಿತುಕೊಂಡು, ಪ್ರತಿಯೊಬ್ಬರೂ ಕಡ್ಡಾಯವಾಗಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದು ತಹಶೀಲ್ದಾರ್ ಸಂತೋಷ ಮ್ಯಾಗೇರಿ ಹೇಳಿದರು.

ಪಟ್ಟಣದ ಶ್ರೀ ಸಂಗಮೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ಮಂಗಳವಾರ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಾಗೂ ಯುವ ಸಂಸತ್ ಸಭೆ ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಮತದಾನ ಪ್ರಜಾಪ್ರಭುತ್ವದ ಪ್ರಮುಖ ಅಸ್ತ್ರವಾಗಿದ್ದು, ಅರ್ಹ ಪ್ರತಿಯೊಬ್ಬ ಯುವಕ-ಯುವತಿಯೂ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಂಡು ಮತದಾನದ ಹಕ್ಕನ್ನು ಸಮರ್ಥವಾಗಿ ಚಲಾಯಿಸಬೇಕು. ದೇಶದ ಭವಿಷ್ಯ ರೂಪಿಸುವಲ್ಲಿ ಯುವಜನರ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಮನು ಪತ್ತಾರ ಅವರು ಸಂವಿಧಾನದ ಪ್ರಸ್ತಾವನೆಯ ಪ್ರತಿಜ್ಞಾ ವಿಧಿ ಬೋಧಿಸಿದರು.ಉಪನ್ಯಾಸಕ ಎಂ.ಎಂ. ಯಂಡಿಗೇರಿ ಅವರು ಪ್ರಜಾಪ್ರಭುತ್ವದ ತಳಹದಿ ಹಾಗೂ ವಿವಿಧ ಪ್ರಕಾರಗಳ ಕು-ರಿತು ಮಾತನಾಡಿ, ಜಾಗತಿಕ ಪ್ರಜಾಪ್ರಭುತ್ವ ಸೂಚ್ಯಂಕದಲ್ಲಿ ಭಾರತದ ಸ್ಥಾನಮಾನ ಸೇರಿದಂತೆ ಪ್ರಜಾಪ್ರಭುತ್ವ ಎದು-ರಿಸುತ್ತಿರುವ ಸವಾಲುಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸುನೀಲ್ ಮದ್ದೀನ ಮಾತನಾಡಿ, ಶಿಕ್ಷಣವಂತ ಹಾಗೂ ಜವಾಬ್ದಾರಿಯುತ ಯುವಜನರಿಂದಲೇ ಪ್ರಜಾಪ್ರಭುತ್ವ ಮತ್ತಷ್ಟು ಬಲಿಷ್ಠವಾಗಲು ಸಾಧ್ಯ. ಯುವಕರು ದೇಶದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಎ.ಡಿ. ಚೌವ್ಹಾಣ್ ಮಾತನಾಡಿ, ಯುವ ಸಂಸತ್ ರಚನೆಯು ವಿದ್ಯಾರ್ಥಿಗಳಿಗೆ ಸಂಸದೀಯ ವ್ಯವಸ್ಥೆ, ಚರ್ಚೆ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಪ್ರಾಯೋಗಿಕ ಅರಿವು ಮೂಡಿಸುವ ಮಹತ್ವದ ವೇದಿಕೆಯಾಗಿದೆ. ಭವ್ಯ ಭಾರತದ ನಿರ್ಮಾಣಕ್ಕೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವಲ್ಲಿ ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಲಿವೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಎಸ್.ಜಿ. ಜಮಖಂಡಿ, ಉಪತಹಸೀಲ್ದಾರ್ ಎನ್.ಕೆ. ನದಾಫ್, ಶಿಕ್ಷಣ ಸಂಯೋಜಕ ವ್ಹಿ.ಎಚ್. ಪುರೋಹಿತ, ರಾಜ್ಯ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಕೆ.ಎಸ್. ಬಾಲಗೊಂಡ, ಎಎಸ್ಐ ಎಸ್. ಆರ್. ಪವಾರ, ಸಂಪನ್ಮೂಲ ವ್ಯಕ್ತಿಗಳಾದ ಸಂಗಮೇಶ ಜಂಗಮಶೆಟ್ಟಿ, ಶಿವಶರಣ ತಡಲಗಿ ಸೇರಿದಂತೆ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪ್ರಾಧ್ಯಾಪಕ ಮೇಟಿ ಕಾರ್ಯಕ್ರಮ ನಿರೂಪಿಸಿದರು. ಪ್ರಾಧ್ಯಾಪಕ ಮಂಜುನಾಥ ಮಟ್ಯಾಳ ವಂದಿಸಿದರು.

# ಶರಣರ ಸಂದೇಶ ಆಲಿಸುವುದು ಪುಣ್ಯದ ಕಾರ್ಯ

■ ಉದಯರಶ್ಮಿ ದಿನಪತ್ರಿಕೆ



**ಬಡದಾಳದ ಡಾ.ಚನ್ನಮಲ್ಲ ಶಿವಯೋಗಿ ಶಿವಾಚಾರ್ಯರ ಅಭಿಮತ**

ಆಲಮೇಲ: ಶರಣರ ಸಂದೇಶಗಳನ್ನು ಆಲಿಸುವುದು ಪುಣ್ಯದ ಕೆಲಸ. ಪ್ರತಿಯೊಬ್ಬರೂ ತಮ್ಮ ಮಾತು ಹಿತವಾಗಿರುವಂತೆ ನೋಡಿಕೊಳ್ಳಬೇಕು. ಶರಣ-ರ ತತ್ವ, ಆದರ್ಶ ಹಾಗೂ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸನ್ಮಾರ್ಗದಲ್ಲಿ ನಡೆಯಬೇಕು ಎಂದು ಬಡದಾಳದ ಡಾ.ಚನ್ನಮಲ್ಲ ಶಿವಯೋಗಿ ಶಿವಾಚಾರ್ಯರು ಹೇಳಿದರು.

ಅವರು ತಾಲೂಕಿನ ಸುಕ್ಷೇತ್ರ ದೇವರನಾವದಗಿ ಗ್ರಾಮದ ಶ್ರೀ ಮಲ್ಲಿಕಾರ್ಜುನ ಮತ್ತು ಶ್ರೀ ಸೋಮೇಶ್ವರ ಜಾತ್ರಾ ಮಹೋತ್ಸವ ಹಾಗೂ ನೂತನ ಕಳಸಾರೋಹಣ ಅಜಾತ ಶ್ರೀ ನಾಗಲಿಂಗರ ಪುರಾಣ ಮಂಗಲೋತ್ಸವದ ಧರ್ಮ ಸಭೆಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಸಾರ್ವಜನಿಕರು ಪರಸ್ಪರ ಸಂವಹನ ನಡೆಸುವ ಸಂದರ್ಭದಲ್ಲಿ ಹಿತವಾದ ಹಾಗೂ ಸೌಮ್ಯವಾದ ಮಾತುಗಳನ್ನು ಬಳಸಬೇಕು. ಶರಣರ ವಿಚಾರಧಾರೆ, ಉತ್ತಮ ನಡವಳಿಕೆ ಮತ್ತು ಸೌಹಾರ್ದಯುತ ಜೀವನ ನಡೆಸಬೇಕು ಎಂದು ಹೇಳಿದರು.

ಕನ್ನೊಳ್ಳಿಯ ಸಿದ್ದಲಿಂಗ ಶಿವಾಚಾರ್ಯರು, ನಿವೃತ್ತ ಶಿಕ್ಷಕ ಅಶೋಕ ಬಡಿಗೇರ, ಶಿಕ್ಷಕ ನಿಂಗಣ್ಣ ಬಿರಾದಾರ, ಭಾಗ್ಯವಂತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಅಶೋಕ ಯರಗಲ, ಅಶೋಕ ಜಾಧವ, ಜಗದೀಶ ಗುಗ್ಗರಿ, ನಿಂಗಣ್ಣ ಸಣ್ಣಕ್ಕಿ ಮಾತನಾಡಿದರು. ಈ ಸಂದರ್ಭದಲ್ಲಿ ಶಾಸಕ ಅಶೋಕ ಮನಗೂಳಿ ಮಂಗಲ ಕಾರ್ಯಾಲಯದ ಅಭಿವೃದ್ಧಿ ಕಾಮಗಾರಿಗಳಿಗಾಗಿ 25 ಲಕ್ಷ ಅನುದಾನ ನೀಡುವುದಾಗಿ ಘೋಷಿಸಿದರು. ಮಾಜಿ ಶಾಸಕ ರಮೇಶ ಭೂಸನೂರ ಸಂಸದರ ಕಡೆಯಿಂದ ಅನುದಾನ ಕೊಡಿಸುವುದಾಗಿ ಭರವಸೆ ನೀಡಿದರು. ಪೂಜ್ಯರ ಸಾರೋಟ ಮೆರವಣಿಗೆ, ಪುರವಂತರು, ಬಾಜಾ ಬಜಂತ್ರಿ, ದೇವರ ಪಲ್ಲಕ್ಕಿ ಮೆರವಣಿಗೆ ಮಾಡಿದರು.

ಶಿಕ್ಷಕ ಚನ್ನು ನಾರಾಯಣಪುರ ನೀರೂಪಿಸಿದರು, ಮುತ್ತು ಗುಗ್ಗರಿ ವಂದಿಸಿದರು.

ವಿಶೇಷ ಸನ್ಮಾನಿತರಾದ ಮಡಿವಾಳ ಗೋಗಿ, ಸತೀಶ ಕೋರಿ, ಡಾ.ಮಹಾಂತೇಶ ಹೀರೆಗೌಡರ, ಶ್ರೀಶೈಲ ಮಠಪತಿ, ರುದ್ರಗೌಡ ಜನಿವಾರ, ಪ್ರಕಾಶ ಗುಗ್ಗರಿ, ಮಡಿವಾಳ ಕುಮಸಿ, ಶಂಕರ ಗುಗ್ಗರಿ, ನಿಂಗಣ್ಣ ಸಿಂದಗಿ, ಬಸವರಾಜ ಬಮ್ಮನಜೋಗಿ, ಗುರುಸಿದ್ಧ ಬಡಿಗೇರ, ಶರಣು, ರಮೇಶ, ಶಿವು ಬಮ್ಮನಜೋಗಿ, ಮಾಂತಯ್ಯ ಮಠಪತಿ, ಮಲಕಣ್ಣ ಕುಮಸಿ ಸೇರಿದಂತೆ ಅಪಾರ ಭಕ್ತ ಬಳಗ ಇದ್ದರು.

# ಜಿಓಸಿಸಿ ಬ್ಯಾಂಕಿಗೆ "ಅತ್ಯುತ್ತಮ ನಗರ ಸಹಕಾರಿ ಬ್ಯಾಂಕ್" ಪ್ರಶಸ್ತಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಸರ್ಕಾರಿ ನೌಕರರ ಸಹಕಾರಿ (ಜಿಓಸಿಸಿ)ಬ್ಯಾಂಕಿಗೆ "ಅತ್ಯುತ್ತಮ ನಗರ ಸಹಕಾರಿ ಬ್ಯಾಂಕ್" ಎಂದು ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಜಿಲ್ಲಾ ಮಧ್ಯವರ್ತಿ ಸಹಕಾರಿ (ಡಿಸಿಸಿ) ಬ್ಯಾಂಕ್ ವತಿಯಿಂದ ಸರ್ಕಾರಿ ನೌಕರರ ಸಹಕಾರಿ ಬ್ಯಾಂಕಿಗೆ 2025-26ನೇ ಸಾಲಿನ "ಅತ್ಯುತ್ತಮ ನಗರ ಸಹಕಾರಿ ಬ್ಯಾಂಕ್" ಪ್ರಶಸ್ತಿಯನ್ನು ಮಾಜಿ ಸಚಿವ ಹಾಲಿ ಶಾಸಕ ಶಿವಾನಂದ ಪಾಟೀಲ ನೀಡಿದರು. ಬ್ಯಾಂಕಿನ ನಿರ್ದೇಶಕರಾದ ಅಲ್ಲಾಭಕ್ಷ ವಾಲಿಕಾರ ಹಾಗೂ ಪ್ರಧಾನ ವ್ಯವಸ್ಥಾಪಕ ಸಿ ಎಸ್ ಹಿರೇಮಠ ಇವರು ಪ್ರಶಸ್ತಿ ಸ್ವೀಕರಿಸಿದರು.

ಪ್ರಶಸ್ತಿಗೆ ಭಾಜನರಾದ ಸರ್ಕಾರಿ ನೌಕರರ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಅರ್ಜುನ ಲಮಾಣಿ ಮಾತನಾಡಿ, ಬ್ಯಾಂಕಿನ ಯಶಸ್ವಿಗೆ ನಿರಂತರ ಬೆಂಬಲ ನೀಡುತ್ತಿರುವ ನಮ್ಮ ಗೌರವಾನ್ವಿತ ಶೇರುದಾರರು ಹಾಗೂ ಗ್ರಾಹಕರು ದಕ್ಷ ಮಾರ್ಗದರ್ಶನ ನೀಡಿದ ಆಡಳಿತ ಮಂಡಳಿ, ಶ್ರಮವಹಿಸಿ ಕಾರ್ಯ ನಿರ್ವಹಿಸಿದ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರಿಗೆ ಪ್ರಶಸ್ತಿ ಕೀರ್ತಿ ಸಲ್ಲಬೇಕು. ಶತಮಾನ ಕಂಡ ನಮ್ಮ ಬ್ಯಾಂಕಿಗೆ ಮುಂದೆಯೂ ಇದೇ ರೀತಿ ಸಹಾಯ ಸಹಕಾರ, ಮಾರ್ಗದರ್ಶನ ನೀಡಬೇಕೆಂದು ಮನವಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷೆ ಪುಷ್ಪಾ ಗಚ್ಚಿನಮಠ, ನಿರ್ದೇಶಕರಾದ ಅರವಿಂದ ಹೂಗಾರ, ಪ್ರಶಾಂತ ಚನಗೊಂಡ, ಹಣಮಂತ ಕೊಣದಿ, ಆನಂದಗೌಡ ಬಿರಾದಾರ, ಅಲ್ಲಾಬಕ್ಷ ವಾಲೀಕಾರ, ಅಶೋಕ ಚನಬಸುಗೋಳ, ಮಲಕಪ್ಪ ಟಕ್ಕಳಕಿ, ಚಂದ್ರಶೇಖರ ಜತ್ತಿ, ಸಯ್ಯದಜುಬೇರ್ ಕೆರೂರ, ಹಣಮಂತರಾಯ ಸಿಂದಗಿ, ಮಹೇಶ ನಾಯಿಕ, ಸರಫರಾಜ ಕಂದಗಲ್, ಗೀತಾ ಹತ್ತಿ, ಪ್ರಧಾನ ವ್ಯವಸ್ಥಾಪಕ ಸಿ ಎಸ್ ಹಿರೇಮಠ, ಶಶಿ ಸಾತಲಗಾಂವ ಸೇರಿದಂತೆ ಬ್ಯಾಂಕಿನ ಸಿಬ್ಬಂಧಿ ಉಪಸ್ಥಿತ-ರಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR